
ಗಾಂಧಿಯಾನ

ಮಾಸಿಕ

ಸಂಪುಟ - ೧ ಸಂಚಿಕೆ - ೧ ಆಗಸ್ಟ್ ೨೦೧೦





* ಸಮತಾಭಾವದ ಫಲ ಸದಾ ಮಧುರ. ಇದರ ತಥ್ಯವನ್ನು ನಾನು ಅನುಕ್ಷಣವೂ ಅನುಭವಿಸಿದ್ದೇನೆ.

***


* ನಾವು ಮೆಚ್ಚಿಸಬೇಕಾದದ್ದು ದೇವರನ್ನು.

***

* ದೇವರನ್ನು ಹೇಗೆ ಮೆಚ್ಚಿಸಬಹುದು? ಹೇಗೆ ನುಡಿಸಬಹುದು? ಆತನೇ ಸೃಷ್ಟಿಸಿದ ಮಾನವನ ಸೇವೆಯ ಮೂಲಕ.

***

* ದೇವರಲ್ಲಿ ವಿಶ್ವಾಸವಿಡುವುದು ಅತಿ ಸುಲಭದ ಕೆಲಸ.



ಗಾಂಧಿಯಾನ

ಮಾಸ ಪತ್ರಿಕೆ

ಸಾವಿನ ನಡುವೆ ಬಾಳು
ಸುಳ್ಳಿನ ನಡುವೆ ಸತ್ಯ
ತಮಸ್ಸಿನ ನಡುವೆ ಜ್ಯೋತಿ.....!

ಸಂಪುಟ – ೧, ಸಂಚಿಕೆ – ೧

ವ್ಯವಸ್ಥಾಪಕ ಸಂಪಾದಕರು
ಸಿವಿಜಿ ಚಂದ್ರು

ಕಸ್ತೂರ್‌ಬಾ ಭವನ
ಗಾಂಧೀ ಭವನದ ಆವರಣ
ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – ೫೬೦ ೦೦೧
E-mail.gandhiyaana@gmail.com

Gandhiyaana Kannada Monthly

Literary and Cultural Magzine, Vol:1, Issue-1, 15th August 2010.

ಗಾಂಧಿಯಾನ

ಮಾಸ ಪತ್ರಿಕೆ

ಗಾಂಧಿ ಸ್ಮಾರಕ ನಿಧಿಯ ಮಾರ್ಗದರ್ಶನದಲ್ಲಿ

ಪೋಷಕರು

ಡಾ| ಹೊ. ಶ್ರೀನಿವಾಸಯ್ಯ

ಸಂಪಾದಕ ಮಂಡಳಿ

ಪ್ರೊ. ಹೆಚ್. ಆರ್. ದಾಸೇಗೌಡ
ಶ್ರೀ ಅಗ್ರಹಾರ ಕೃಷ್ಣಮೂರ್ತಿ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಶ್ರೀ. ಶೂದ್ರ ಶ್ರೀನಿವಾಸ್
ಡಾ. ಬೈರಮಂಗಲ ರಾಮೇಗೌಡ
ಡಾ. ಮೀರಾಸಾಬಿಹಳ್ಳಿ ಶಿವಣ್ಣ
ಪ್ರೊ. ಎಂ. ಜಿ. ಚಂದ್ರಶೇಖರಯ್ಯ
ಪ್ರೊ. ಓ. ಅನಂತರಾಮಯ್ಯ
ಶ್ರೀ. ಸಿ. ಎಚ್. ಹನುಮಂತರಾಯ
ಶ್ರೀ ಕೆ. ಜಿ. ವೆಂಕಟೇಶ
ಶ್ರೀ ಆರ್. ಚಂದ್ರಶೇಖರ್

ವ್ಯವಸ್ಥಾಪಕ ಸಂಪಾದಕರು

ಚನ್ನವೀರೇಗೌಡ 'ಸಿವಿಜಿ ಚಂದ್ರು'

ಕಾರ್ಯನಿರ್ವಾಹಕ ಸಂಪಾದಕಿ

ಗಿರಿಜಾ ಗೌಡ

ಸಂಚಿಕೆ ಕಲಾವಿದರು

ಮುರಳೀಧರ ರಾಠೋಡ್


ಬೆಲೆ : 25/-

Edited, Printed, Published and Owned by Channaveeregowda, Kasturba Bhavana. Gandhi Bhavana Compound, Kumara Park East, Bangalore - 560 001.
Fax : 080- 22261967, Mob : 9449008890

* ಈ ಸಂಚಿಕೆಯ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯ ಆಯಾ ಲೇಖಕರದು ಮಾತ್ರ

ಸಂಪಾದಕೀಯ

ಅಗ್ರಹಾರ ಕೃಷ್ಣಮೂರ್ತಿ



ಭಾರತೀಯ ಮನಸ್ಸು ಗಾಂಧೀ ಚಿಂತನೆಯಿಂದ ಸಮೃದ್ಧಗೊಳ್ಳುತ್ತಲೇ ಇದೆ. ಭಾರತೀಯ ಮನಸ್ಸಿಗೆ ಪರಿಪೂರ್ಣ ಮುಕ್ತಿ ದೊರಕಿಸಿಕೊಟ್ಟವರೇ ಗಾಂಧೀಜಿ. ಭಾರತ ಅಷ್ಟೆ ಅಲ್ಲ, ಇಡೀ ಜಗತ್ತಿನಲ್ಲಿ ಕಾಲಕಾಲಕ್ಕೆ ನಡೆದಿರುವ ಚಾರಿತ್ರಿಕ, ಸಾಮಾಜಿಕ ಹಾಗೂ ರಾಜಕೀಯ ಚಳವಳಿಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಆಗಿರುವ ಗಾಂಧೀಜಿ ಪ್ರಭಾವವನ್ನು ಗುರುತಿಸಬಹುದು. ಅನೇಕ ಪ್ರಪಂಚ ನಾಯಕರೆನಿಸಿಕೊಂಡವರು ತಮ್ಮ ಮೇಲೆ ಆಗಿರುವ ಗಾಂಧೀ ಪ್ರಭಾವವನ್ನು ಸ್ಮರಿಸಿದ್ದಾರೆ. ಭಾರತದ ಹೊರಗೆ ಈಗಲೂ 'ಗಾಂಧೀಗಿರಿ'ಯ ಘಟನೆಗಳು ನಡೆಯುತ್ತಲೇ ಇರುತ್ತವೆ. ದೇಶದ ಒಳಗೆ ಗಾಂಧೀ ವಿಚಾರ ತತ್ವಗಳು ಅಕಾಡೆಮಿಕ್ ವಲಯದಲ್ಲಿ ಬದಲಾವಣೆಗಳ ಜೊತೆಗೆ ಸಾಗುತ್ತಿವೆ. ಅನೇಕ ವಿಶ್ವವಿದ್ಯಾಲಯಗಳಲ್ಲಿ ಗಾಂಧೀ ಕೇಂದ್ರಿತ ವಿಷಯಗಳನ್ನು ಕುರಿತು ತರುಣ ವಿದ್ವಾಂಸರು ಸಂಶೋಧನೆ ಮಾಡುತ್ತಿದ್ದಾರೆ. ಪ್ರತಿವರ್ಷ ಗಾಂಧೀ ಕುರಿತ ನೂರಾರು ಪುಸ್ತಕಗಳು ಪ್ರಪಂಚದಾದ್ಯಂತ ಪ್ರಕಟಗೊಳ್ಳುತ್ತಿವೆ.

ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲೂ ಗಾಂಧೀ ಆಧಾರಿತ

ಮತ್ತು ಗಾಂಧೀ ಕೇಂದ್ರಿತ ಕೃತಿಗಳು ಎಲ್ಲ ಭಾರತೀಯ ಭಾಷೆಗಳಲ್ಲೂ ಆಗಾಗ ಪ್ರಕಟಗೊಳ್ಳುತ್ತಲೇ ಇವೆ. ಹಲವು ನಾಟಕಗಳು, ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿವೆ. ಇತ್ತೀಚೆಗೆ ಹಿಂದಿಯ ಶ್ರೇಷ್ಠ ಕಾದಂಬರಿಕಾರ ಗಿರಿರಾಜ ಕಿಶೋರ್ ಅವರ ಕಾದಂಬರಿ 'ಪೆಹಲಿ ಗಿರ್‌ಮಿಟಿಯಾ' ಎಂಬ ಕಾದಂಬರಿ 'ಗಿರ್‌ಮಿಟಿಯಾ ಸಾಗಾ' ಎಂಬ ಶೀರ್ಷಿಕೆ ಹೊತ್ತು ಇಂಗ್ಲಿಷಿಗೆ ಅನುವಾದಗೊಂಡು ಪ್ರಕಟವಾಯಿತು. ಒಂದು ಸಾವಿರ ಪುಟಗಳಿಗೂ ಮೀರಿದ ಈ ಕೃತಿ ಗಾಂಧೀಜಿಯವರ ದಕ್ಷಿಣ ಆಫ್ರಿಕಾದ ಬದುಕನ್ನೂ, ಹೋರಾಟವನ್ನೂ ಚಿತ್ರಿಸುತ್ತದೆ. ಈ ಕೃತಿ ಪಡೆಯುತ್ತಿರುವ ಯಶಸ್ಸನ್ನು ನೋಡಿದರೆ ಗಾಂಧಿ ಎಷ್ಟು ಪ್ರಸ್ತುತರೆಂಬುದು ಮನವರಿಕೆಯಾಗುತ್ತದೆ.

ಗಾಂಧೀ ಪೂರ್ವದಲ್ಲಿ ಬುದ್ಧ, ಬಸವ, ನಾರಾಯಣಗುರು ಮುಂತಾದವರು ಭಾರತೀಯ ಮನಸ್ಸನ್ನು ಅನೇಕ ಜಡತೆಗಳಿಂದ ಮುಕ್ತಗೊಳಿಸಿದ್ದರು. ಪಾಶ್ಚಿಮಾತ್ಯ ಪ್ರದೇಶಗಳಲ್ಲಿ ಏಸು ಕ್ರಿಸ್ತನಿಂದ ಹಿಡಿದು ಆಧುನಿಕ ಟಾಲ್‌ಸ್ಟಾಯ್ ಅಂಥವರವರೆಗೂ ನಡೆದುಬಂದ ವಿಚಾರಧಾರೆ ಜಗತ್ತನ್ನೆಲ್ಲ ಪ್ರಭಾವಗೊಳಿಸಿದೆ. ಗಾಂಧೀಜಿ ಈ ಎರಡೂ- ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿಚಾರಧಾರೆಗಳನ್ನು ತಮ್ಮ ಕ್ರಿಯಾಶೀಲತೆಯಲ್ಲಿ ಮಿಳಿತಗೊಳಿಸಿ ಜಗತ್ತು ಅಚ್ಚರಿಪಡುವಂಥ ಅಹಿಂಸಾಧರ್ಮವನ್ನು ಸೃಷ್ಟಿ ಮಾಡಿದರು. ಅದನ್ನು ಅತ್ಯಂತ ಸಮರ್ಥವಾಗಿ ಬಳಸಿ ಯಶಸ್ವಿಯಾದರು. ಅವರ ಚಿಂತನೆ ಸಾರ್ವಕಾಲಿಕ ಮೌಲ್ಯಗಳನ್ನು ಒಳಗೊಂಡಿದ್ದರೂ ಅನೇಕ ಸ್ಥಳೀಯ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಪರಿಹಾರಗಳನ್ನು ಒದಗಿಸಬಲ್ಲ ಚಿಂತನೆಯಾಗಿದೆ. ಅವರ ಚಿಂತನೆಯನ್ನು ಭಾಷೆ, ಶಿಕ್ಷಣ, ಜೀವನ ವಿಧಾನ, ರಾಜಕಾರಣ, ಸಮಾಜಸೇವೆ ಮುಂತಾದ ಕ್ಷೇತ್ರಗಳಲ್ಲಿ, ಆಯಾಕಾಲದ ಅಗತ್ಯಕ್ಕನುಗುಣವಾಗಿ ಅಳವಡಿಸಿಕೊಳ್ಳುವುದು ಒಂದು ನೀತಿಯಾಗಿ ರೂಪುಗೊಳ್ಳಬೇಕು.


ಆಧುನಿಕತೆಯು ಅಳತೆಗೆ ಸಿಗಲಾರದಷ್ಟು ವೇಗವಾಗಿ ಮುಂದೋಡುತ್ತಿದೆ. ಇದು ಅಪಾಯದ ಕಡೆಗೆ ಸಾಗುತ್ತಿಲ್ಲ ಎಂದು ಹೇಳಲಾಗುವುದಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನದ ಈ ನಾಗಾಲೋಟ ಮನುಷ್ಯನನ್ನೇ ಒಂದು ಯಂತ್ರವನ್ನಾಗಿ ಪರಿವರ್ತಿಸುವ ಭಯ ಮೂಡುತ್ತಿದೆ. ಇಂಥ ವಾತಾವರಣದಲ್ಲಿ ಗಾಂಧೀ ಚಿಂತನೆಯೇ ನಮ್ಮ ಮೂಲ ಮಂತ್ರವಾಗಬೇಕಾಗಿದೆ.

ಈ ದಿಕ್ಕಿನಲ್ಲಿ ಅಂಬೆಗಾಲಿನ ಒಂದು ಪುಟ್ಟ ಹೆಜ್ಜೆ 'ಗಾಂಧೀಯಾನ'. ನಿಮ್ಮ ಬೆಂಬಲ ನಮ್ಮ ಜೊತೆಗಿರಲಿ.

೧೦, ಆಗಸ್ಟ್ ೨೦೧೦

ಗಾಂಧೀಜಿಯವರನ್ನು ಒಳಗೆ ಬಿಟ್ಟು ಕೊಳ್ಳುವುದೆಂದರೆ....

ಶೂದ್ರ ಶ್ರೀನಿವಾಸ್



"ಗಾಂಧಿಯ ಹಾದಿ ತನ್ನದೆಂದು ಹೇಳಿಕೊಳ್ಳಬೇಕಾದರೆ ನೀನು ನಿನ್ನನ್ನೇ ಶೋಧಿಸಿಕೊಳ್ಳಬೇಕಾಗುತ್ತದೆ. ವ್ಯಕ್ತಿ ಕಠಿಣ ಮಾನದಂಡದಿಂದ ತನ್ನನ್ನು ತಾನು ಅಳೆದುಕೊಳ್ಳಬೇಕಾಗುತ್ತದೆ. ಅನೇಕ ಜನರು ಇದನ್ನು ಪಾಲಿಸಲು ಇಷ್ಟಪಡುವುದಿಲ್ಲ!"

– ರಜನಿ ಭಕ್ಷಿ

ಗಾಂಧೀಜಿಯನ್ನು ಕುರಿತು ಓದಿದಂತೆಲ್ಲ, ಚಿಂತಿಸಿದಂತೆಲ್ಲ ಏನೇನೋ ಹೊಳಹುಗಳು ವಿಸ್ತಾರಗೊಳ್ಳುತ್ತಲೇ ಹೋಗುತ್ತವೆ. ಇದಕ್ಕೆ ಮುಖ್ಯ ಕಾರಣ: ಗಾಂಧೀಜಿಯವರ ಆಲೋಚನಾ ಕ್ರಮದಲ್ಲಿರುವ ದಟ್ಟತೆ ಮತ್ತು ಅಪ್ಪಟ ದೇಸೀಯತೆ. ಮುವ್ವತ್ತೈದು ವರ್ಷಗಳಿಂದ 'ಹಿಂದ್ ಸ್ವರಾಜ್' ಕೃತಿಯೇ ಪ್ರತಿ ಓದಿಗೂ ಒಳನೋಟಗಳನ್ನು ಕೊಡುತ್ತಲೇ ಹೋಗುತ್ತಿದೆ. ಈ ಕೃತಿ ಪುಟ್ಟದಾದರೂ ನನಗೆ ಬೈಬಲ್, ಭಗವದ್ಗೀತೆ ಇದ್ದಂತೆ. ಇದು ಕೇವಲ ಭಾರತವನ್ನು ಕುರಿತಂತೆ ಮಾತಾಡುವುದಿಲ್ಲ. ಜಗತ್ತಿನ ಎಲ್ಲ ಸಾಮಾಜಿಕ ನೆಲೆಗಳನ್ನು ಒಳಗೊಂಡಂತೆ ಧ್ವನಿಸುತ್ತಿರುತ್ತದೆ. ಇಂದು ಜಗತ್ತಿನ ಎಲ್ಲ ಭಾಷೆಗಳಲ್ಲಿ ಗಾಂಧೀಜಿಯವರನ್ನು ಕುರಿತಂತೆ ಪ್ರತಿದಿವಸ ಒಂದು ಕೃತಿ ಬರುತ್ತದೆ, ಚಿಂತನೆ ನಡೆಯುತ್ತಿರುತ್ತದೆ. ಆಗ ನಾನು ಗಾಂಧೀಜಿಯವರನ್ನು ನನ್ನ ದೇಶದವನೆಂದು ನೋಡುವುದಿಲ್ಲ. ನನಗೇನು ಕೊಡುತ್ತಿದ್ದಾನೆಂದು ನೋಡುತ್ತೇನೆ.

ಹಾಗೆಯೇ ಬದುಕಿನ ಎಚ್ಚರದ ಧ್ವನಿಗಳಿಗೆ ಹೇಗೆ ಚೈತನ್ಯದಾಯಕನಾಗಿರುತ್ತಾನೆ ಎಂಬುದು ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ ಮಹತ್ವಪೂರ್ಣವಾದದ್ದನ್ನು ಒಳಗೆ ಬಿಟ್ಟುಕೊಳ್ಳಬೇಕಾದರೆ ಹೇಗೆ ಹೆಣಗಾಡುತ್ತೇವೋ ಅಂಥ ಪರಿಸ್ಥಿತಿ ಪ್ರತಿಕ್ಷಣವೂ ಮುಖಾಮುಖಿಯಾಗುತ್ತಿರುತ್ತದೆ.

ನನ್ನ ಮಾನಸಿಕ ಚಲನಶೀಲತೆಗೆ ಕಾವು ಕೊಡುವ ರೀತಿಯಲ್ಲಿ ಗಾಂಧೀಜಿಯವರ ಚಿಂತನೆಗಳಿಂದ ಪ್ರಣೀತಗೊಂಡ ಎಷ್ಟೊಂದು ಮಂದಿ ಓಡಾಡುತ್ತಿದ್ದಾರೆ. ಅವರೆಲ್ಲ ನಾವು ಅನುಭವಿಸುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಸೃಜನಶೀಲ ವಿರೋಧ ಪಕ್ಷ'ದಂತೆ ದುಡಿಯುತ್ತಿದ್ದಾರೆ. ಇಲ್ಲದಿದ್ದರೆ ನಮ್ಮ ಸ್ವಾತಂತ್ರ್ಯದ ಪರಿಕಲ್ಪನೆಗಳಿಗೆ ಮರೆವು ಆವರಿಸಿಕೊಂಡು




ಬಿಡುವ ದುರಂತ ನಮ್ಮ ಮನೆ ಬಾಗಿಲಲ್ಲಿ ಬಂದು ಕೂತುಬಿಡುತ್ತಿತ್ತು. ಈ ನಿಟ್ಟಿನಲ್ಲಿ ಧ್ಯಾನಸ್ಥರಾಗಿ ಕ್ರಿಯಾಶೀಲರಾಗಿರುವ ದೊಡ್ಡ ಸಮೂಹವೇ ಭಾರತದ ಉದ್ದಗಲಕ್ಕೂ ಅಥವಾ ಜಗತ್ತಿನ ಉದ್ದಗಲಕ್ಕೂ ಹಂಚಿ ಹೋಗಿದ್ದಾರೆ.ಅವರನ್ನೆಲ್ಲ ಪಟ್ಟಿಮಾಡಿ ತೋರಿಸಲು ಹೋಗುವುದಿಲ್ಲ. ಆದರೆ ಪ್ರತಿಕ್ಷಣವೂ ನನ್ನೊಳಗಿನ ನಿಷ್ಕ್ರಿಯತೆಯ ಸ್ವರೂಪವನ್ನು ಕೆದಕುವ ರೀತಿಯಲ್ಲಿ ನನ್ನ ಮುಂದಿದ್ದಾರೆ. ಹಾಗೆ ನೋಡಿದರೆ ಗಾಂಧೀಜಿಯವರು ಸುಮಾರು ಒಂದೂವರೆ ಶತಮಾನದಿಂದ 'ಸಾಕ್ಷಿ ಪ್ರಜ್ಞೆ' ಯ ಸಂಕೇತವಾಗಿ ಆವರಿಸಿಕೊಂಡು ಬಿಟ್ಟಿದ್ದಾರೆ. ಇದು ಸಾಹಿತ್ಯದಲ್ಲಿ ಒಂದು ರೂಪದಲ್ಲಿ ನಡೆಯುತ್ತಿದ್ದರೆ; ಇನ್ನು ಭಿನ್ನ ಭಿನ್ನ ನೆಲೆಗಳಲ್ಲಿ ಸಮಾಜದ ವಿವಿಧ ಸ್ತರಗಳಲ್ಲಿ ಆಕಾರ ಪಡೆಯುತ್ತಿರುತ್ತದೆ. ಲಕ್ಷಾಂತರ ಮಂದಿಯ ಮನೋಭೂಮಿಕೆಯಲ್ಲಿ ಭಾವ ಸ್ಪಂದನವಾಗಿ ತುಂಬಿಕೊಳ್ಳುತ್ತಿರುತ್ತದೆ. ಹೀಗೆ ಆಗುವುದರಿಂದಲೇ ಯಾವುದೇ ಸಮಾಜ ಪೂರ್ಣ ರೋಗಿಷ್ಟವಾಗದೆ ಇನ್ನೂ ಉಳಿದಿರುವುದು. ಹಾಗೆಯೇ ನಾವು ಎಲ್ಲರ ಧ್ವನಿಯಾಗಬೇಕು ಎಂಬ ತಹತಹ ಜೀವಂತವಾಗಿರುವುದು. ಕಲಿತ ಮಂದಿ ಕಲಿಯುತ್ತಲೇ ಸಾಮಾಜಿಕವಾಗಿ ಪಾಲ್ಗೊಳ್ಳುವುದಿದೆಯಲ್ಲ ಅದನ್ನು ಗಾಂಧೀಜಿಯವರ ಚಿಂತನೆ ನಮಗೆ ಪರೋಕ್ಷವಾಗಿ ಕಲಿಸುತ್ತಲೇ ಹೋಗುತ್ತಿದೆ. ಆದ್ದರಿಂದಲೇ ನಮ್ಮ ನಮ್ಮ ದೋಷಗಳು ಇಂತಿಂಥ ಹಂತಗಳಲ್ಲಿ ನಡೆಯುತ್ತಿದೆ ಎಂಬುದು ತಕ್ಷಣ ಗೋಚರಿಸುತ್ತ ಹೋಗುವುದು. ಇಲ್ಲದಿದ್ದರೆ ನಮ್ಮಲ್ಲಿ 'ಆವರಣ' ಮತ್ತು 'ಕವಲು' ರೀತಿಯ ಬರವಣಿಗೆ ವ್ಯಾಪಕಗೊಂಡು ವಿಷಮಯವಾಗಿ ಬಿಡುತ್ತಿತ್ತು.

ಒಟ್ಟು ವಾತಾವರಣ

ಗಾಂಧೀಜಿಯವರನ್ನು ನಮ್ಮೊಳಗೆ ಬಿಟ್ಟುಕೊಳ್ಳಲು ಪ್ರಯತ್ನ ನಡೆಯುತ್ತಿರುವಾಗಲೇ ತಿದ್ದುವುದು ಮತ್ತು ಸರಿಪಡಿಸಿಕೊಳ್ಳುವುದು ನಡೆಯುತ್ತಲೇ ಇರುತ್ತದೆ. ಅವರ ಅರ್ಥದಂತೆ ಮನೆ ಕಟ್ಟಿ ಖುಷಿಯಿಂದ ಒಳಗೆ ಸೇರಿಕೊಳ್ಳುವುದಲ್ಲ; ನಿರಂತರ ಅದನ್ನು ರಿಪೇರಿ ಮಾಡುವ ಮನಸ್ಥಿತಿಯಿಲ್ಲದಿದ್ದರೆ ಮನೆಯ ವಾತಾವರಣವನ್ನು ಸಂಭ್ರಮಿಸಲು ಸಾಧ್ಯವಿಲ್ಲ. ಇಂಥ ಇಲ್ಲಿಯ ಹಸಿವು, ಬಡತನ ಮತ್ತು ಸುಖ-ದುಃಖದ ರೂಪರೇಷೆಗಳ ಸ್ವರೂಪವೇ ಮನದಟ್ಟು ಆಗದೆ ಇರಬಹುದು. ಹೀಗೆ ಆಗದೇ ಹೋದಾಗ ಕ್ರೌರ್ಯವೆಂಬುದು ವಿಕೃತವಾಗುತ್ತ ಹೋಗಬಹುದು. ಇದೆಲ್ಲವನ್ನು ಕೊನೆಗೂ ತಿಳಿಯುವುದೆಂದರೆ ಸಹನೆಯನ್ನು ಕಾಪಾಡಿಕೊಳ್ಳುವುದು ಮತ್ತು ಬೆಳೆಸಿಕೊಳ್ಳುವುದು. ಗಾಂಧೀಜಿಯವರ 'ಅರ್ಥ' ಚಿಂತನೆಯಲ್ಲಿ 'ಸಹನೆ' ಯೆಂಬುದು ಮಹಾನ್ ಅಸ್ತ್ರ. ಅದರಿಂದಲೇ ತಿಳಿಯುವಿಕೆ ಮತ್ತು ಅರಿಕೆ ಮೂಲ ವಿಸ್ತಾರ ಪಡೆಯುತ್ತ ಹೋಗುವುದು. ತನ್ನನ್ನು ತಾನು ತಿಳಿಯಲೂ ಕೂಡ 'ಸಹನೆ' ಎಂಬುದು ಬಹಳ ಮುಖ್ಯ. ಪ್ರತಿಯೊಂದರ ಅರ್ಥವ್ಯಾಪ್ತಿ ವಿಶಾಲಾರ್ಥವನ್ನು ಪಡೆಯುವುದು ಇದರಿಂದಲೇ. ಗಾಂಧೀಜಿಯವರು ತುಂಬ ತೀಕ್ಷ್ಣ ಸಮಯದಲ್ಲಿ 'ಮೌನ'ಕ್ಕೆ ಮೊರೆಹೋಗುತ್ತಿದ್ದುದು 'ಸಹನೆ' ಯನ್ನು ಪರೀಕ್ಷಿಸಿಕೊಳ್ಳುವುದಕ್ಕೆ. 'ಸಹನೆ' ಅವರ ಪಾಲಿಗೆ ದೇವರಿದ್ದಂತೆ. ಬುದ್ಧನೂ ಕೂಡ ಇದನ್ನೇ ಅಲ್ಲವೇ ಹೇಳಿರುವುದು.

ಹಿಂದೆ ಪ್ರಸ್ತಾಪಿಸಿರುವಂತೆ ಇಂದು ಹೋರಾಟದಲ್ಲಿ ತೊಡಗಿರುವ ಮಂದಿಯೆಲ್ಲ ಗಾಂಧೀಜಿಯವರನ್ನು ಮುಂದಿಟ್ಟುಕೊಂಡು ಬದುಕುತ್ತಿರುವಂಥವರು. ಪ್ರತಿಕ್ಷಣವೂ ವೈಯಕ್ತಿಕ ಮತ್ತು ಸಾಮೂಹಿಕ ಹಿಂಸೆಯನ್ನು ತಡೆಗಟ್ಟಿ ಮನುಷ್ಯ ಸಮಾಜದಲ್ಲಿರುವ ಅಸಹನೆ ಮತ್ತು ಅಸಮಾಧಾನದ ಬೇರುಗಳ ಸ್ವರೂಪವನ್ನು ತಿಳಿಯಲು ಪ್ರಯತ್ನಿಸುತ್ತಿರುವುದು. ಹಾಗೆ ನೋಡಿದರೆ ಅಸಹನೆಯಿಂದ ಯಾವ ಕ್ರಾಂತಿಯೂ ಫಲಕಾರಿಯಾಗಿಲ್ಲ. ಸಮಾಜದ ಏರುಪೇರುಗಳನ್ನು ಕಾಣುವುದೆಂದರೆ ಸಮಾಧಾನ ಚಿತ್ತನಾಗುವುದು ಎಂದು ಅರ್ಥ. ಇದಿಲ್ಲದಿದ್ದರೆ ಯಾರ ಮುಂದೆಯೂ



ನಿಲ್ಲಲಾಗುವುದಿಲ್ಲ. ದೂರ ಸರಿದಂತೆಲ್ಲ ದ್ವೇಷ ಮತ್ತು ಅಸೂಯೆ ದ್ವಿಗುಣಗೊಂಡು ನೆಮ್ಮದಿಯನ್ನು ಕಳಕೊಳ್ಳುತ್ತೇವೆ ಮತ್ತು ಅಕ್ಕ ಪಕ್ಕದವರ ಪ್ರಾಥಮಿಕ ನೆಮ್ಮದಿಯನ್ನು ಕಿತ್ತುಕೊಳ್ಳುತ್ತೇವೆ. ಕೊನೆಗೂ ಗಾಂಧೀಜಿಯವರ ಚಿಂತನೆಗಳನ್ನು ಒಳಗೆ ಬಿಟ್ಟುಕೊಳ್ಳುವುದೆಂದರೆ ಇದೆಲ್ಲವೂ ನಮ್ಮದೂ ಹೌದು ನನ್ನದೂ ಹೌದು; ಅದಕ್ಕೆ ಧಕ್ಕೆ ಬರದಂತೆ ರಕ್ಷಿಸಿಕೊಂಡು ಸಂಭ್ರಮಪಡುತ್ತ ಹೋಗಬೇಕಾಗುತ್ತದೆ. ಆಗ ಅಲ್ಲಿ ಬದುಕನ್ನು ಕಂಡುಕೊಳ್ಳುವ ಸಡಗರವಿರುತ್ತದೆ. ಅದಕ್ಕೆ ತಕ್ಕ ಸರಳತೆ ಮತ್ತು ನಿರಾಡಂಬರತೆ ಸ್ವಾಭಾವಿಕವಾಗಿಯೇ ಸ್ಥಾಯಿಯಾಗುವುದು. ಬಹುಮುಖೀ ನೆಲೆಗಳನ್ನು ಹೆಚ್ಚು ತಿಳಿದು ಪ್ರತಿಕ್ರಿಯಿಸಲು ಸಾಧ್ಯವಾಗುವುದು. ಒಟ್ಟು ಪರಿಸರಕ್ಕೆ ಆರೋಗ್ಯಪೂರ್ಣತೆಯನ್ನು ತಂದುಕೊಡದೆ ನಾವ್ಯಾರೂ 'ನೆಮ್ಮದಿ'ಯನ್ನು ತಂದುಕೊಳ್ಳಲು ಆಗುವುದಿಲ್ಲ. ಪ್ರತಿಯೊಂದರಲ್ಲೂ ಸುಖ ಸಂತೋಷವಿರಬೇಕಾದರೆ, ನಮ್ಮ ಆಯ್ಕೆಯ ಪ್ರಶ್ನೆ ಕೂಡ ಮುಖ್ಯ. ಸೌಂದರ್ಯದ ಪರಿಕಲ್ಪನೆ ವೃದ್ಧಿಸುವುದೂ ನನ್ನ ಮುಂದಿರುವ ಯಾವ ಜೀವಂತ ವಸ್ತುವನ್ನೂ 'ಮುಕ್ಕು' ಮಾಡಬಾರದು ಎಂದು ತಿಳಿದಾಗ ಮಾತ್ರ ಕೊನೆಗೊಂದು ಮಾತು: ಗಾಂಧೀಜಿಯವರು ನನ್ನ ಬಾಲ್ಯಕಾಲದ ನೆನಪನ್ನು ಜೀವಂತವಾಗಿಟ್ಟಿದ್ದಾರೆ.

ಅಣ್ಣನ ಸ್ನೇಹಿತನ ಸಹವಾಸದಲ್ಲಿ!

ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದ ಅವಧಿಯಲ್ಲಿಯೇ, ಗಾಂಧೀ ಒಬ್ಬಾತನ ಸಹವಾಸದ ದಾಕ್ಷಿಣ್ಯಕ್ಕೆ ಸಿಕ್ಕಿಕೊಂಡರು. ಆತ ತನ್ನ ಅಣ್ಣನ ಸ್ನೇಹಿತನಾಗಿದ್ದ. ಅದೇ ತರಗತಿಯವನೂ ಆಗಿದ್ದ, ಕೆಲವಾರು ದೋಷಗಳು ಆತನಲ್ಲಿದ್ದುವೆಂಬುದು ಗಾಂಧಿಗೂ ತಿಳಿದಿತ್ತು. ಆದರೂ ಆತನ ಗೆಳೆತನದ ಗಾಳಕ್ಕೆ ಬಿದ್ದರು. ತನ್ನ ತಾಯಿ, ದೊಡ್ಡಣ್ಣ ಮತ್ತು ತನ್ನ ಹೆಂಡತಿ– ಮೂವರೂ ಆ ಬಗ್ಗೆ ಎಚ್ಚರಿಸಿದಾಗ ದೋಷಯುಕ್ತನಾದ ಆತನನ್ನು ಒಳ್ಳೆಯ ಮಾರ್ಗಕ್ಕೆ ತರುವುದಕ್ಕಾಗಿಯೇ ತಾನು ಆತನ ಗೆಳೆತನ ಮಾಡುತ್ತಿರುವುದಾಗಿ ಉತ್ತರಿಸಿ ತನ್ನ ದಾರಿಯಲ್ಲಿ ಮುಂದುವರಿದಿದ್ದ ವಿದ್ಯಾರ್ಥಿ ಗಾಂಧಿ.

ಆ ಸ್ನೇಹಿತ ಆಗಿಂದಾಗ– "ನೋಡು ಗಾಂಧೀ, ಆಂಗ್ಲರು ಮಾಂಸಾಹಾರಿಗಳಾಗಿ, ದೈತ್ಯರಾಗಿ ಬೆಳೆದು, ಮಾಂಸಾಹಾರಿಗಳಲ್ಲದ, ದುರ್ಬಲರೂ ಆಗಿರುವ ನಮ್ಮನ್ನು ಆಳುತ್ತಿದ್ದಾರೆ" ಎಂದು ಹೇಳುತ್ತ ಆಗ ಪ್ರಚಾರದಲ್ಲಿದ್ದ–


"ಅಂಗ್ರೇಜ ರಾಜ್ ಕರೇ। ದೇಶಿ ರಹೇ ದಬಾಯಿ, ದೇಶೀ ರಹೇ ದಬಾಯಿ ಜೋನೇ। ಚೈನೀ ಶರೀರ ಭಾಯಿ. ಪೇಲೋ ಪಾಂಚ ಹಾಥ ಪೂರೋ। ಪೂರೋ ಮಾಂಸ ಸೇವೇ (ಆಂಗ್ಲೇಯರು ದುರ್ಬಲ ಶರೀರಿಗಳಾದ ದೇಶೀಯರನ್ನು ಹತೋಟಿಯಲ್ಲಿಟ್ಟುಕೊಂಡು ಆಳುತ್ತಾರೆ. ಇದಕ್ಕೆ ಕಾರಣ ಅವರು ಚೆನ್ನಾಗಿ ಮಾಂಸವನ್ನು ತಿಂದು ಐದು ಮೊಳ–ಏಳೂವರೆ ಅಡಿ ಎತ್ತರವಾಗಿ ಧಾಂಡಿಗರಾಗಿರುವುದೇ)" ಎಂಬ ಹಾಡನ್ನು ಕೇಳಿಸುತ್ತಿದ್ದ.

ಮಾಂಸ ಸೇವಿಸಿ, ನಾವೂ ಬಲಾಢ್ಯರಾಗಿ ಆಂಗ್ಲರನ್ನು ಹೊರದೂಡಬೇಕೆಂದೇ ಅನೇಕ ಹಿಂದೂ ಉಪಾಧ್ಯಾಯರು ಮಾತ್ರವಲ್ಲ ಕೆಲವು ಪ್ರಸಿದ್ಧ ವ್ಯಕ್ತಿಗಳೂ ಅಭ್ಯಾಸಿಗಳಾಗಿದ್ದಾರೆಂದು ಹೆಸರುಗಳು ಸಹಿತ ಉದಾಹರಿಸಿದ. ಅದು ನಿಜವೂ ಆಗಿತ್ತು. ಕಟ್ಟುಮಸ್ತಾಗಿದ್ದ ಹಾಗೆಯೇ ನಿರ್ಭಿತನೂ ಆಗಿದ್ದ ಆತನಂತೆ ತಾನೂ ಬಲಾಢ್ಯನಾಗಬೇಕು, ಹಾಗೆಯೇ ನಿರ್ಭೀತನಾಗಬೇಕು ಎಂಬ ಅಭಿಪ್ರಾಯದಿಂದ ಮಾಂಸಾಹಾರದ ಸೇವನೆಗೆ ಗಾಂಧಿಯ ಮನಸ್ಸು ಸಿದ್ಧವಾಯಿತು. ಹೀಗೆ ಪ್ರಕಾಶಿಸುವ ಚಂದಿರನಂತಿದ್ದ ಗಾಂಧೀ ವ್ಯಕ್ತಿತ್ವಕ್ಕೆ ಅಣ್ಣನ ಸ್ನೇಹಿತನ ಸಹವಾಸ ಗ್ರಹಣವಾಗಿ ವಕ್ಕರಿಸಿತ್ತು.

ಎಲ್. ನರಸಿಂಹಯ್ಯ ತೊಂಡೋಟಿ, ತುಮಕೂರು

ಅಸಾಧಾರಣ ವ್ಯಕ್ತಿತ್ವದ ಒಂದು ಮಾದರಿ

ಡಾ. ಬೈರಮಂಗಲ ರಾಮೇಗೌಡ



ಮಹಾತ್ಮ ಗಾಂಧಿ ಎರಡು ಸಾವಿರ ವರ್ಷಗಳ ಭಾರತೀಯ ಪರಂಪರೆಯ ಪ್ರತೀಕ. ಈ ನೆಲದಲ್ಲಿ ಸ್ವರ್ಗವನ್ನು, ಮಾನವನ ಹೃದಯದಲ್ಲಿ ದೈವತ್ವವನ್ನು ಕಾಣಲು ಹಂಬಲಿಸಿ ಅದರ ಸಾಕ್ಷಾತ್ಕಾರಕ್ಕಾಗಿ ಜೀವನದುದ್ದಕ್ಕೂ ಶ್ರಮಿಸಿದವರು ಗಾಂಧಿ. ಸರ್ವೋದಯ ಜಗತ್ತನ್ನು ತುಂಬಿಕೊಂಡು ಎಲ್ಲೆಲ್ಲೂ ಚಿರಶಾಂತಿ ನೆಲೆಸಬೇಕೆನ್ನುವುದು ಅವರ ಜೀವನದ ಗುರಿ. ಅಸ್ಪೃಶ್ಯತೆ ಮತ್ತು ಜಾತೀಯತೆ ಭರತಖಂಡಕ್ಕೆ ಬಡಿದ ಶಾಪ. ಅದರಿಂದ ಮುಕ್ತವಾಗದೆ ರಾಷ್ಟ್ರಕ್ಕೆ ಕ್ಷೇಮವಿಲ್ಲವೆಂದು ಬಲವಾಗಿ ನಂಬಿದ್ದ ಗಾಂಧಿ ಆ ದಿಕ್ಕಿನಲ್ಲಿ ತ್ರಿಕರಣಪೂರ್ವಕವಾಗಿ ಕಾರ್ಯಪ್ರವೃತ್ತರಾಗಿದ್ದರು. ಭಾರತಕ್ಕೆ ಅಹಿಂಸೆ, ಸ್ವಾತಂತ್ರ್ಯ ಮತ್ತು ಧೈರ್ಯವೆನ್ನುವ ಕಾಣಿಕೆಗಳನ್ನು ಕೊಟ್ಟರು. ರಕ್ತಪಾತವಿಲ್ಲದೆ ಅಹಿಂಸೆಯನ್ನೇ ಅಸ್ತ್ರವಾಗಿ ಬಳಸಿ ಮಹಾಶಕ್ತಿಗಳನ್ನು ದಮನಗೊಳಿಸಬಹುದೆಂದೂ ರಾಜಕೀಯ ಗುಲಾಮತನದಿಂದ ಬಿಡಿಸಿಕೊಳ್ಳಬಹುದೆಂದೂ ಜಗತ್ತಿನೆದುರು ಪ್ರತ್ಯಕ್ಷೀಕರಿಸಿದರು. ಆದ್ದರಿಂದ ಭಾರತೀಯರಿಗೆ ಮನುಷ್ಯತ್ವವೂ ಭಾರತಕ್ಕೆ ಗೌರವವೂ ಲಭಿಸಿದ್ದು ಗಾಂಧಿಯಿಂದ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ.

ಮಹಾತ್ಮನಲ್ಲಿದ್ದ ಮಾಂತ್ರಿಕ ಶಕ್ತಿ ಎಂಥದ್ದು ಎಂದರೆ


ಅವರು ಹೋದೆಡೆಯಲ್ಲೆಲ್ಲಾ ಜನಸಾಮಾನ್ಯರ ಜಾತ್ರೆ ನೆರೆಯುತ್ತಿತ್ತು. ಅನೇಕರ ಪಾಲಿಗೆ ಬಡಜನತೆಯ ಸಂಕಟಗಳನ್ನು ದೂರಮಾಡಲು ಬಂದ ದೇವದೂತನಂತೆಯೇ ಗಾಂಧಿ ಕಾಣುತ್ತಿದ್ದರು. ಗಾಂಧಿಯ ಸರಳ, ನೇರ ಮಾತುಗಳನ್ನು ಆಲಿಸಲು, ಅವರನ್ನು ಕಣ್ಣೊಳಗೆ ತುಂಬಿಕೊಳ್ಳಲು ಜನ ಕಾತರಿಸುತ್ತಿದ್ದರು. ಅವರು ಎಲ್ಲೇ ಭಾಷಣ ಮಾಡಿದರೂ ಕೆಲವು ಮಾತುಗಳು ತಪ್ಪದೇ ತೂರಿಕೊಂಡು ಬರುತ್ತಿದ್ದವು. "ನೀವು ಸರಳರೂ, ಸತ್ಯವಂತರೂ ಆಗಿರಲು ಪ್ರಯತ್ನಿಸಬೇಕು. ನಿಮ್ಮ ಬಡ ಸಹೋದರ ಸಹೋದರಿಯರಿಗೆ ಸಹಾಯ ಮಾಡಬೇಕು. ದೇಶಕ್ಕೆ ಸ್ವಾತಂತ್ರ್ಯ ತರಲು ಪ್ರಯತ್ನಿಸಬೇಕು. ನೀವೆಲ್ಲರೂ ಖಾದಿ ಧರಿಸಬೇಕು. ಯಾವಾಗಲೂ ಮದ್ಯಪಾನ ಮಾಡಬಾರದು. ಶುದ್ಧವಾದ ಜೀವನ ನಡೆಸಬೇಕು. ಎಲ್ಲದಕ್ಕೂ ಮೇಲಾಗಿ ಪ್ರಾಮಾಣಿಕರಾಗಿರಲು ಪ್ರಯತ್ನಿಸಬೇಕು."



ತುಂಬಾ ಸರಳವಾಗಿರುತ್ತಿದ್ದ ಈ ಮಾತುಗಳು ನೆರೆದಿದ್ದವರನ್ನು ತೀವ್ರವಾಗಿ ತಟ್ಟುತ್ತಿತ್ತೆನ್ನುವುದಕ್ಕೆ ಸಾಕ್ಷಿಯಾಗಿ ಕೆಲವರ ಕಣ್ಣುಗಳಲ್ಲಿ ನೀರಾಡುತ್ತಿರುತ್ತಿತ್ತು. ಆ ಮಾತುಗಳು ಬೀರಿದ ಪ್ರಭಾವಕ್ಕೆ ಪ್ರತಿಕ್ರಿಯೆ ಎಂಬಂತೆ ಜನಸಮುದಾಯ "ಮಹಾತ್ಮಾ ಗಾಂಧೀ ಕೀ ಜೈ" ಎನ್ನುತ್ತಿತ್ತು. ಗಾಂಧೀಜಿಯವರದು ಕೋಮಲವಾದ ವ್ಯಕ್ತಿತ್ವ. ಕಲಹ ಸಂಘರ್ಷಗಳಿಗೆ ಬದಲಾಗಿ ಒಳ್ಳೆಯ ಗುಣಗಳಿಗೆ, ಶಾಂತಿಪ್ರಿಯತೆಗೆ, ಸ್ನೇಹ ಸಹಕಾರಗಳ ಸಿದ್ಧಹಸ್ತಕ್ಕೆ ಅವರು ವಿನಂತಿಸಿಕೊಳ್ಳುತ್ತಿದ್ದರು. ತಮಗಾಗಿ ಏನನ್ನೂ ಬೇಡದೆ ದೇಶಕ್ಕಾಗಿ ಅಸಹಾಯಕರಿಗಾಗಿ ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ನೆರವು ನೀಡುವಂತೆ ಮನವಿ ಮಾಡಿಕೊಳ್ಳುತ್ತಿದ್ದುದರಿಂದ, ಗಾಂಧಿಯ ವ್ಯಕ್ತಿತ್ವವೇ ಅವರ ಮಾತು ನಡವಳಿಕೆಗಳಲ್ಲಿ ತುಂಬಿಕೊಂಡು ಬರುತ್ತಿದ್ದುದರಿಂದ ಜನ ಮೋಡಿಗೊಳಗಾದಂತೆ ಗಾಢ ಪ್ರಭಾವಕ್ಕೊಳಗಾಗುತ್ತಿದ್ದರು.

ಜನಸಮುದಾಯವನ್ನು ಸೂಜಿಗಲ್ಲಿನಂತೆ ತಮ್ಮೆಡೆಗೆ ಆಕರ್ಷಿಸಬಲ್ಲ ವ್ಯಕ್ತಿತ್ವ ಗಾಂಧಿ ಹೊಂದಿದ್ದರೆನ್ನುವುದಕ್ಕೆ ನೂರಾರು ವಿಶಿಷ್ಟ ನಿದರ್ಶನಗಳು ದೊರೆಯುತ್ತವೆ. ಅಂಥ ಒಂದು ನಿದರ್ಶನವಿಲ್ಲಿದೆ. ಹಣ ಸಂಗ್ರಹಣೆಗಾಗಿ ಬೇರಾರೂ ಆಲೋಚಿಸಲು ಸಾಧ್ಯವಿರದಿದ್ದ, ಬೇರೆಯವರಿಂದ ಸಾಧ್ಯವೂ ಆಗದಂಥ ಒಂದು ಸಾಹಸಕ್ಕೆ ಗಾಂಧಿ ಪ್ರೀತಿಯಿಂದ ಮುಂದಾಗಿದ್ದರು. ತಾವು ಭಾಗವಹಿಸುತ್ತಿದ್ದ ಸಭೆ ಸಮಾರಂಭಗಳಲ್ಲಿ ಹರಿಜನರ ಕಾರ್ಯಕ್ಕಾಗಿ ಕಾಣಿಕೆಗಳನ್ನು ಕೇಳುತ್ತಿದ್ದರು. ಕೇಳುವ ರೀತಿ ಹೇಗಿರುತ್ತಿತ್ತೆಂದರೆ ಎಂಥವರೂ ತಮ್ಮಲ್ಲಿದ್ದ

ಏನನ್ನು ಬೇಕಾದರೂ ಗಾಂಧಿಗೆ ಕೊಡಲು ಸಿದ್ಧವಾಗಿ ಬಿಡುತ್ತಿದ್ದರು. ಗಾಂಧೀಯವರನ್ನು ಒಮ್ಮೆ ದೇಶಬಂಧು ಚಿತ್ತರಂಜನದಾಸರ ಹಿರಿಯ ಮಗಳು ಶ್ರೀಮತಿ ಅಪರ್ಣಾರಾಯ್ ತಾವು ಮತ್ತು ತಮ್ಮ ಸಂಘದ ಸದಸ್ಯರು ಹಾಡುವ ಬಂಗಾಳಿ ವೈಷ್ಣವ ಕೀರ್ತನೆಗಳನ್ನು ಕೇಳಲು ಬರುವಂತೆ ತಮ್ಮ ಮನೆಗೆ ಆಹ್ವಾನಿಸಿದರು. ಗಾಂಧೀಜಿ ಸಂತೋಷದಿಂದ ಕಸ್ತೂರಬಾ ಅವರನ್ನೂ ಜೊತೆಗೆ ಕರೆದುಕೊಂಡು ಬಂದರು. ಸಮಾರಂಭಕ್ಕೆ ಬೆಲೆಬಾಳುವ ಆಭರಣಗಳನ್ನು ತೊಟ್ಟುಕೊಂಡು ಬರಬಾರದೆಂದು ಅಪರ್ಣಾರಾಯ್ ಮಹಿಳೆಯರಿಗೆಲ್ಲ ಎಚ್ಚರಿಕೆ ಕೊಟ್ಟಿದ್ದರು. ಆದರೆ ತಮ್ಮ ಪುಟ್ಟ ಮಗುವಿಗೆ ಅಜ್ಜ ಪ್ರೀತಿಯಿಂದ ಕೊಟ್ಟ ಒಡವೆಗಳನ್ನೆಲ್ಲ ಹಾಕಿ ಅಲಂಕರಿಸಿದ್ದರು. ಅದನ್ನು ಆಶೀರ್ವಾದಕ್ಕಾಗಿ ಗಾಂಧಿಯವರ ಬಳಿಗೆ ಎತ್ತಿಕೊಂಡು ಬಂದರು. ಗಾಂಧಿ ಮಗುವನ್ನು ಎತ್ತಿಕೊಂಡು ಮುದ್ದಾಡಿದರು. ಆಮೇಲೆ "ಮಗುವನ್ನು ಹೇಗೆ ಸಿಂಗರಿಸಬೇಕೆಂದು ನಿಮಗೆ ತಿಳಿಯದು" ಎಂದು ಹೇಳುತ್ತ ಅದರ ಆಭರಣಗಳನ್ನೆಲ್ಲ ಕಳಚಿ ಒಂದು ಪಕ್ಕದಲ್ಲಿ ಹಾಕಿದರು. "ಮುದ್ದು ಮಗುವಿನ ಮೈಮೇಲಿದ್ದ ಆಭರಣಗಳನ್ನು ತೆಗೆಯುವ ನೀವೆಷ್ಟು ಕ್ರೂರಿಗಳು" ಎಂದು ಕಸ್ತೂರಬಾ ಆಕ್ಷೇಪಿಸುತ್ತಿದ್ದರೂ ಗಾಂಧಿ ಆ ಮಾತುಗಳಿಗೆ ಗಮನಕೊಡದೆ ಆಭರಣವಿಲ್ಲದ ಮಗುವನ್ನು ಹಾಸಿಗೆಯ ಮೇಲೆ ಮಲಗಿಸಿ " ಈಗ ನೋಡು ಇವನು ಚಕ್ರವರ್ತಿಯಂತೆ ಸಹಜ ಸೌಂದರ್ಯದಿಂದ ಕಂಗೊಳಿಸುತ್ತಿದ್ದಾನೆ" ಎಂದರು. "ಮಗುವಿನ ಹೆಸರಿನಲ್ಲಿ ಹರಿಜನ ಕಾರ್ಯಕ್ಕಾಗಿ ಈ ಒಡವೆಗಳನ್ನು ತೆಗೆದುಕೊಳ್ಳುತ್ತೇನೆ. ಈಗ ದಯವಿಟ್ಟು ನಿನ್ನ ಒಡವೆಗಳ ಪೆಟ್ಟಿಗೆಯನ್ನು ತೆಗೆದುಕೊಂಡು ಬಾ" ಎಂದು ಅಪರ್ಣಾ ರಾಯ್‌ಗೆ ಹೇಳಿದರು. ಅಪರ್ಣಾ ಕಣ್ಣುಗಳು ನೀರಿನಿಂದ ತುಂಬಿಕೊಂಡರೂ ಗಾಂಧೀಜಿಯವರ ಬೇಡಿಕೆಯನ್ನು ನಿರಾಕರಿಸಲಾಗಲಿಲ್ಲ. ಆಭರಣಗಳ ಪೆಟ್ಟಿಗೆ ತಂದು ಗಾಂಧೀಜಿಯ ಮುಂದಿರಿಸಿದರು. ಗಾಂಧಿ ಪೆಟ್ಟಿಗೆಯಲ್ಲಿದ್ದ ಕೆಲವು ದೊಡ್ಡ ಒಡವೆಗಳನ್ನು ಆರಿಸಿಕೊಂಡು "ಇಲ್ಲಿ ನೋಡು ಮಹಾವ್ಯಕ್ತಿಯ ಮಗಳಾಗಿ ನೀನು ಅರ್ಥ ಮಾಡಿಕೊಳ್ಳಬಲ್ಲೆ. ಹರಿಜನ ಕಲ್ಯಾಣಕ್ಕೆ ಬೇಕೆಂದು ಇವುಗಳನ್ನು ನಾನು ತೆಗೆದುಕೊಳ್ಳುತ್ತೇನೆ. ಬಡದೇಶದಲ್ಲಿ ಇಂಥ ಆಭರಣಗಳ ವೈಭವ ಬೇಕಾಗಿಲ್ಲ. ಮತ್ತೆ ಈ ಆಭರಣಗಳನ್ನು ಧರಿಸಿಕೊಳ್ಳುವುದಿಲ್ಲವೆಂದು ನೀನು ನನಗೆ ಮಾತು ಕೊಡು"




ಎಂದು ಹೇಳಿ ಅಪರ್ಣಾರಿಂದ ಮಾತು ತೆಗೆದುಕೊಂಡರು. ಇದು ಹಿಂದೆ ಅಪರ್ಣಾ ರಾಯ್ ಅವರಿಗಾಗಿದ್ದ ಅನುಭವ. ಆದ್ದರಿಂದಲೇ ಒಡವೆಗಳನ್ನು ಹಾಕಿಕೊಂಡು ಬರದಂತೆ ಸಂಘದ ಸದಸ್ಯರಾಗಿದ್ದ ಮಹಿಳೆಯರಿಗೆ ಅವರು ತಾಕೀತು ಮಾಡಿದ್ದರು. ತಮಗಾದ ಕಹಿ ಅನುಭವ ಉಳಿದವರಿಗೆ ಆಗಬಾರದೆಂದು ಎಚ್ಚರಿಕೆ ವಹಿಸಿದ್ದರು. ಆದರೆ ನಡೆದದ್ದೇ ಬೇರೆ.

ಹಾಡುಗಾರಿಕೆ ನಿರಂತರ ಎರಡು ಗಂಟೆಗಳವರೆಗೆ ನಡೆಯಿತು. ಗಾಂಧಿ ತಾಳ್ಮೆಯಿಂದ ಕುಳಿತು ಎಲ್ಲವನ್ನೂ ಕೇಳಿ ಸಂತೋಷಪಟ್ಟರು. ಉದ್ವೇಗದ ಘಳಿಗೆ ನಂತರ ಪ್ರಾರಂಭವಾಯಿತು. ಗಾಂಧಿ ಮಾತನಾಡುತ್ತ "ನೀವು ನನ್ನನ್ನು ಕೀರ್ತನೆ ಕೇಳುವಂತೆ ಮಾಡಿದಿರಿ. ಅದೊಂದು ರಸಮಯ ಅನುಭವ. ಈಗ ನಾನು ಹರಿಜನರಿಗಾಗಿ ಏನಾದರೂ ಕಾಣಿಕೆ ಕೊಡಿರೆಂದು ಕೇಳುತ್ತಿದ್ದೇನೆ. ದಯವಿಟ್ಟು ಕೊಡಿ" ಎಂದರು. ಇಡೀ ಸಭೆಯಲ್ಲಿ ನಿಧಾನವಾಗಿ ಚಲನೆ ಪ್ರಾರಂಭವಾಯಿತು. ಪ್ರತಿಯೊಂದು ಮೂಲೆಯಿಂದ ಅವರವರ ಶಕ್ತ್ಯಾನುಸಾರ ನಾಣ್ಯ ನೋಟುಗಳು ಬರತೊಡಗಿದವು. ಅದರಲ್ಲಿ ಹತ್ತು ರೂಪಾಯಿ, ಐದು ರೂಪಾಯಿ, ಇನ್ನೂ ಕಡಿಮೆ ಮೌಲ್ಯದ ನಾಣ್ಯ ನೋಟುಗಳು ಇದ್ದವು. ಹಣ ಚೆನ್ನಾಗಿಯೇ ಸಂಗ್ರಹವಾಯಿತು. ಈ ನಡುವೆ ಯುವತಿಯೊಬ್ಬಳು ತನ್ನ ಕಿವಿಯಲ್ಲಿದ್ದ ಓಲೆಗಳನ್ನು ತೆಗೆದು ಗಾಂಧೀಜಿಯವರ ಪಾದಗಳ ಮೇಲಿರಿಸಿದಳು. ಗಾಂಧಿ ಆಕೆಗೆ ನಮಸ್ಕರಿಸಿ ಓಲೆಗಳನ್ನು ಚೀಲಕ್ಕೆ ಹಾಕಿಕೊಂಡರು. ಉಳಿದವರ ಮೇಲೂ ಈ ಘಟನೆ ಪರಿಣಾಮ ಬೀರಿತು. ಅನೇಕ ಮಹಿಳೆಯರು ತಮ್ಮ ಓಲೆಗಳನ್ನು ಕಳಚಿಕೊಟ್ಟರು. ಒಬ್ಬ ಮಹಿಳೆ ಕೈಗೆ ಹಾಕಿಕೊಂಡಿದ್ದ ಎರಡು ಚಿನ್ನದ ಬಳೆಗಳನ್ನೇ ತೆಗೆದುಕೊಟ್ಟಳು. ಹರಿಜನ ಕಾರ್ಯಕ್ಕೆ ಬಳುವಳಿಯಾಗಿ ಬಂದ ಕಾಣಿಕೆಗಳಿಂದ ಗಾಂಧೀಜಿ ಸಂತುಷ್ಟರಾದರು. ಅವುಗಳನ್ನೆಲ್ಲ ಚೀಲಕ್ಕೆ ತುಂಬಿಸಿಕೊಂಡು ಹೊರಟರು. ಇದು ಗಾಂಧೀಜಿಯ ವ್ಯಕ್ತಿತ್ವ ಮತ್ತು ಅದಕ್ಕಿದ್ದ ಅಪೂರ್ವ ಶಕ್ತಿ.

ಕ್ಷಾಮ ಪರಿಹಾರಕ್ಕೆ, ಪ್ರವಾಹ ಸಂತ್ರಸ್ತರಿಗೆ, ನೆಲೆ ಕಳೆದುಕೊಂಡವರ ಪುನರ್ವಸತಿಗೆ ಹೀಗೆ ನಾನಾ ಕಾರಣಗಳನ್ನು ಮುಂದೊಡ್ಡಿ ಈಗಲೂ ನಮ್ಮ ರಾಜಕಾರಣಿಗಳು ಜನರಿಂದ ಕಾಣಿಕೆಗಳನ್ನು, ಧನಸಹಾಯವನ್ನು ಬಯಸುತ್ತಾರೆ. ಜನ ರಾಜಕಾರಣಿಗಳ ಬೇಡಿಕೆಯನ್ನು ಅಪಹಾಸ್ಯ ಮಾಡುತ್ತಾರೆ. ಅಧಿಕಾರಕ್ಕೆ ಬಂದ ಒಂದೆರಡೇ ವರ್ಷಗಳಲ್ಲಿ ಕೋಟಿಗಟ್ಟಲೆ ಆಸ್ತಿಯನ್ನು ಭ್ರಷ್ಟಮಾರ್ಗಗಳಿಂದ ಸಂಪಾದಿಸಿರುವ ಇವರೇ ಏಕೆ ಕೊಡಬಾರದು? ನಮ್ಮ ಬಳಿಯಲ್ಲಿ ಹಲ್ಗಿಂಜುವುದಕ್ಕೆ ಇವರಿಗೆ ನಾಚಿಕೆಯಾಗುವುದಿಲ್ಲವೇ? ಎಂದೆಲ್ಲಾ ಜನ ಮಾತಾಡಿಕೊಂಡು ಮನರಂಜನೆ ಪಡೆಯುತ್ತಾರೆ ಅಥವಾ ಅಸಹನೆ ವ್ಯಕ್ತಪಡಿಸುತ್ತಾರೆ. ಗಾಂಧೀಜಿ ಕೇಳಿದಾಗ ಜನ ಕೊಡುತ್ತಿದ್ದುದಕ್ಕೂ, ಈಗ ರಾಜಕಾರಣಿಗಳು ಕೇಳಿದಾಗ ಕೊಡದಿರುವುದಕ್ಕೂ ವ್ಯತ್ಯಾಸ ಸ್ಪಷ್ಟವಾಗಿದೆ. ಮಹಾತ್ಮರಿಗಿದ್ದ ನೈತಿಕ ಮತ್ತು ಬದ್ಧತೆ ಇಂದಿನ ರಾಜಕಾರಣಿಗಳಲ್ಲಿ ಇಲ್ಲವಾಗಿದೆ.

ನಮ್ಮ ಸುತ್ತಿನ ಗಾಂಧಿಗಳು

ಡಾ. ಮೀರಾಸಾಬಿಹಳ್ಳಿ ಶಿವಣ್ಣ



ನಾನು ಗಾಂಧಿ ಹತವಾದ ನಂತರ ಹುಟ್ಟಿದವನು (೧೯೫೩). ಹೀಗಾಗಿ ಗಾಂಧಿಯನ್ನು ಕಣ್ಣಾರೆ ಕಾಣುವ ಭಾಗ್ಯ ದೊರೆಯದಿದ್ದರೂ ಗಾಂಧಿ ಒಂದು ದಂತಕತೆಯಂತೆ ಕಾಡಿದ್ದಾರೆ. ನನ್ನ ಬದುಕಿನಲ್ಲಿ ನಿರಂತರವಾಗಿ ಗಾಂಧಿಯ ಅನುಸಂಧಾನ ನಡೆಯುತ್ತಲೇ ಇದೆ.

ನಾನಿನ್ನೂ ಪ್ರೈಮರಿ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ನಮ್ಮ ಮೇಷ್ಟ್ರುಗಳು ಗಾಂಧಿಯ ಬಗ್ಗೆ ಬಿತ್ತಿದ ಬೀಜಗಳು ನನ್ನೊಳಗೆ ಬೆಳೆಯುತ್ತಲೇ ಇವೆ. ಸುಳ್ಳು ಹೇಳಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟ ಗಾಂಧಿಯ ಕತೆ ನನ್ನನ್ನೂ ಸುಳ್ಳು ಹೇಳದಂತೆ ಕಾಯುವ ಬೇಲಿಯಾಗಿ ಕೆಲಸ ಮಾಡಿದುದು ಇಂದಿಗೂ ರೋಮಾಂಚನದ ಪ್ರಸಂಗವೇ ಆಗಿದೆ. ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಧ್ವಜ ಹಾರಿಸಿದ ನಂತರ ಬಂದ ಅತಿಥಿಗಳು ಗಾಂಧಿಯನ್ನು ನೆನೆಯುತ್ತಾ ಮಾಡುತ್ತಿದ್ದ ಭಾಷಣಗಳು ಇನ್ನೂ ಕಿವಿಯಲ್ಲಿ ನಿನಾದಿಸುತ್ತಲೇ ಇವೆ. ಅದರಲ್ಲೂ ಇಂಥ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿತಗೊಳ್ಳುತ್ತಿದ್ದ ಊರ ಪಟೇಲರಾದ ನನ್ನ ತಂದೆ ಪಟೇಲ್ ದೊಡ್ಡೇಗೌಡರವರ ಭಾಷಣವಂತೂ

ಮರೆಯಲಾಗದುದು. ಅವರೂ ಗಾಂಧಿಯನ್ನು ಕಣ್ಣಾರೆ ಕಂಡವರಲ್ಲ. ಗಾಂಧಿಯನ್ನು ಕುರಿತು ಓದಿ ತಿಳಿದುಕೊಳ್ಳಲು, ಶಾಲೆಯ ಮೆಟ್ಟಿಲನ್ನೇ ಹತ್ತಿದವರಲ್ಲ! ಕುರಿ ಕಾಯುತ್ತಿದ್ದ ಅವರಿಗೆ ಓದಬೇಕೆಂಬ ಹಂಬಲ. ಅವಕ್ಕೆ ಮನೆಯವರ ಪ್ರೋತ್ಸಾಹವಿಲ್ಲ. ಶಾಲೆಯ ಒಂದಿನ ಬಯಲಲ್ಲಿ ಕುರಿಬಿಟ್ಟುಕೊಂಡು ಮೇಯಿಸುವಾಗ ಕಿಟಕಿಯಲ್ಲಿ ಇಣಿಕಿನೋಡುತ್ತಾ, ಕಿಟಕಿಯ ಹೊರಗಡೆಯೇ ನಿಂತು ಮೇಷ್ಟ್ರ ಪಾಠ ಕೇಳಿಸಿಕೊಳ್ಳುತ್ತಾ ತಮ್ಮ ಓದಿನ ಬಯಕೆಯನ್ನು ತೀರಿಸಿಕೊಳ್ಳುತ್ತಿದ್ದರು. ಆಗ ಅವರ ವಯಸ್ಸು ೧೮ ವರ್ಷ! ಕೊನೆಗೆ ರಾತ್ರಿ ಕುರಿಗಳನ್ನು ಹಟ್ಟಿಗೆ ಕೂಡಿ ಎಲ್ಲರೂ ಮಲಗಿದಾಗ ಎದ್ದು ರಾತೋ ರಾತ್ರಿ ಮೇಸ್ಟರ ಮನೆಗೆ ಹೋಗಿ ಅವರ ಸೇವೆ ಮಾಡುತ್ತಾ ಬೆಳಗಿನ ಜಾವದವರೆಗೂ ಕಲಿಯುತ್ತಿದ್ದರು!




ಹೀಗೆ ಅವರು ಕಲಿತು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪ್ರಭುತ್ವ ಸಂಪಾದಿಸಿದ್ದರು. ಅವರು ಭಾಷಣಕ್ಕೆ ನಿಂತರೆ ಅವರ ವಾಗ್ಝರಿಗೆ ಎಂಥ ವಿದ್ಯಾವಂತನೂ ಮರುಳಾಗುತ್ತಿದ್ದ. ಜೀವನದಲ್ಲಿ ಅವರ ಪಟ್ಟ ಕಷ್ಟವೇ ಕಾರಣವೇನೋ ತಿಳಿಯದು, ಚಿಕ್ಕ ವಯಸ್ಸಿಗೇ ಅವರೊಬ್ಬ ತತ್ವಶಾಸ್ತ್ರ ಚಿಂತನೆ ಮಾಡುವ ಅಧ್ಯಾತ್ಮಿಯಾಗಿ ಬೆಳೆದರು. ಅವರ ಅಗಾಧವಾದ ತಿಳುವಳಿಕೆ, ಮಾತಿನ ಮೋಡಿಗೆ ಎಂಥವರೂ ಅವರ ಆರಾಧಕರಾಗಿ ಬಿಡುತ್ತಿದ್ದರು. ಕಾಯಕವೇ ಕೈಲಾಸವೆಂದು ಕೃಷಿಯೋಗಿಯಾಗಿದ್ದ ಅವರು ಇಹ-ಪರ ಎರಡರಲ್ಲೂ ಅದ್ವಿತೀಯ ಸಾಧನೆ ಮಾಡಿದ್ದರು. ತಮಗರಿವಿಲ್ಲದೆಯೇ ತಮ್ಮ ಬದುಕಿನುದ್ದಕ್ಕೂ ಗಾಂಧಿಯ ತತ್ವವನ್ನು ಅಳವಡಿಸಿಕೊಂಡು ಊರಿಗೇ ಮಾದರಿಯಾಗಿ ಬದುಕಿದ ಅವರು ನಾನು ಕಂಡ ಮೊದಲ ಗಾಂಧಿ.

ನಮ್ಮ ತಂದೆ ಬೊಮ್ಮೇಗೌಡರ ಸಮಕಾಲೀನರಾಗಿದ್ದ ನಮ್ಮ ಊರಿನ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಬೆಳಗೆರೆ ಕೃಷ್ಣಶಾಸ್ತ್ರಿಯವರು ಸಮಾಜಮುಖಿ ಚಿಂತನೆಗಳಲ್ಲಿ ಬೆಳೆದವರು. ತಾವು ಹೋದ ಕಡೆಯೆಲ್ಲಾ ಕಟ್ಟಡವಿಲ್ಲದ ಶಾಲೆಗೆ ಕಟ್ಟಡಗಳನ್ನು ಕಟ್ಟಿಸುತ್ತಾ ಬಂದರು. ತಮ್ಮ ಸಾಹಿತ್ಯದ ಸೇವೆಯೊಂದಿಗೆ ಮುರಿದ ಮನಸ್ಸುಗಳನ್ನು ಕಟ್ಟುತ್ತಾ, ವ್ಯಕ್ತಿ

ನಂತರದ ತಮ್ಮ ಬದುಕನ್ನೇ ಶಿಕ್ಷಣಕ್ಕಾಗಿ, ಸಮಾಜಕ್ಕಾಗಿ ಮೀಸಲಿಟ್ಟವರು. ಇವರು ಗಾಂಧಿಯನ್ನು ನೋಡಿದ್ದರಂತೆ. ಸ್ವಲ್ಪ ದೂರದಲ್ಲೇ ನಿಂತು ಅವರ ಸೇವೆಯನ್ನು ಮಾಡಿದ್ದರಂತೆ! ಬಹುಶಃ ಗತಕಾಲಕ್ಕೆ ಸೇರಿಹೋಗಬಹುದಾಗಿದ್ದ ಗಾಂಧಿಯನ್ನು ಮತ್ತೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿಸಿದರು. (ಇವರನ್ನು ಕುರಿತ ಜೀವನ ಚರಿತ್ರೆಯನ್ನು ಬರೆಯುತ್ತಿದ್ದೇನೆ.) ಇವರು ನಾ ಕಂಡ ಎರಡನೇ ಗಾಂಧಿ. ಇವರ ತಂದೆ ಆಶುಕವಿಯಾಗಿದ್ದ ಕಡಲೆಕಾಯಿ ಚಂದ್ರಶೇಖರ ಶಾಸ್ತ್ರಿ 'ನಿನಗೇನ್ಗೊತ್ತು ನಮ್ಮಜ್ಜನ್ ತಲ್ಕಾಯಿ ಬುಲ್ಡೆ' ಎಂದು ಗಾಂಧಿಯ ಮೇಲೆ ಕವಿತೆಯನ್ನೇ ಕಟ್ಟಿದ್ದರು.

ನಮ್ಮ ಚಿತ್ರದುರ್ಗ ಬಯಲುಸೀಮೆ ಗಾನಗಂಧರ್ವೆ ಜನಪದ ಸಿರಿ ಸಿರಿಯಜ್ಜಿ ಕೂಡಾ ಅಸಂಖ್ಯ ಹಾಡುಗಳನ್ನು ಹಾಡುತ್ತಲೇ ಗಾಂಧಿಯಂತೆ ಬದುಕಿದವಳು. ಹಳ್ಳಿಯ ಈ ಮುಕ್ಕ ಕೂಡಾ ಗಾಂಧಿಯನ್ನು ಕಂಡವಳೇನಲ್ಲ. ಗಾಂಧಿ ದೇಶಕ್ಕೆ ದುಡಿಯುತ್ತಲೇ ಮಡಿದಂತೆ, ನಾಡಿಗಾಗಿ ಹಾಡುತ್ತಲೇ ಸಗ್ಗ ಸೇರಿದವಳು ಈಕೆ. (ಈಕೆಯನ್ನು ಕುರಿತು ಒಂದು ಪುಟ್ಟ ಜೀವನ ಚರಿತ್ರೆ 'ಜಾನಪದ ಸರಸ್ವತಿ ಸಿರಿಯಜ್ಜಿ' ಕೃತಿ ರಚಿಸಿದ್ದೇನೆ, ಗಮನಿಸಿ) ಗಾಂಧಿಯ ಬದುಕಿನ ಅನೇಕ ಮಗ್ಗುಲುಗಳನ್ನು ಈಕೆಯ ಬದುಕಿನಲ್ಲಿ ಗುರುತಿಸಬಹುದು. ಗಾಂಧಿಯನ್ನು ಕಾಣದೆಯೇ ಗಾಂಧಿಯ ಬಗ್ಗೆ ಹಾಡನ್ನು ಕಟ್ಟಿದ್ದಳು. ಈಕೆ ನಾನು ಕಂಡ ಮತ್ತೊಬ್ಬ ಗ್ರಾಮೀಣ ಗಾಂಧಿ.

ನಮ್ಮೂರಿನ ಅಧ್ಯಾತ್ಮ ಜೀವಿಗಳಾದ ದಿ. ಗುಡಿಯಪ್ಪನವರು ಎಷ್ಟೋ ಜನಗಳ ಹೃದಯದಲ್ಲಿ ಅಧ್ಯಾತ್ಮದ ದೀವಿಗೆಯನ್ನು ಬೆಳಗಿಸಿದವರು. ಅವರ ಸಮಕಾಲೀನರೇ ಆಗಿದ್ದ ದಿ. ಗುಜ್ಜಜ್ಜನಂತೂ ಗಾಂಧಿಯಂತೆಯೇ ಅರೆಬಟ್ಟೆಯ ಫಕೀರನಾಗೇ ಅವರಿವರ ಮನೆಯ ಹರಿದ ಬಟ್ಟೆಗಳನ್ನು ಹೊಲಿಯುತ್ತಾ, ಹರಿದ ಜೀವಿಗಳಿಗೆ ತೇಪೆ ಹಾಕುವ ಅಧ್ಯಾತ್ಮದ ಕುಸುರಿ ಕೆಲಸ ಮಾಡುತ್ತಾ ಹೊಸ ಹಜ್ಜೆಯನ್ನಿಟ್ಟ. ಗಾಂಧಿಯನ್ನು ಕಂಡರಿಯದೇ ಗಾಂಧಿಯಂತೆ ಬದುಕಿದ ಇವರೂ ನಮ್ಮೂರ ಗಾಂಧಿಗಳು.



ನಾನು ಬೆಳೆದಂತೆಲ್ಲಾ ಓದುತ್ತಾ ಮೇಲು ಮೇಲಿನ ತರಗತಿಗಳಿಗೆ ಹೋದಂತೆಲ್ಲಾ ಗಾಂಧಿಯನ್ನು ಕುರಿತ ಸಾಹಿತ್ಯ ಓದಿದೆ. ಅವರನ್ನು ಕುರಿತ ಸಾಕ್ಷ್ಯಚಿತ್ರಗಳನ್ನು ನೋಡಿದೆ. ಅವರ ಬದುಕನ್ನು ಆಧರಿಸಿ ತೆಗೆದ ಚಲನಚಿತ್ರಗಳನ್ನು ನೋಡುತ್ತಾ, ಗಾಂಧಿಯ ವ್ಯಕ್ತಿತ್ವದ ಮುಖಗಳ ಪರಿಚಯವಾಗುತ್ತಾ ಹೋಯಿತು. ಗಾಂಧಿಯನ್ನು 'ಮಹಾತ್ಮ'ನಂತೆ ನೋಡಿದ ಸಾಕ್ಷ್ಯಚಿತ್ರಕ್ಕಿಂತ ಭಿನ್ನವಾಗಿ ಗಾಂಧಿಯನ್ನು ಕೇವಲ 'ಗಾಂಧಿ'ಯಂತೆ ನೋಡಿ ಚಿತ್ರಿಸಿದ ರಿಚರ್ಡ್ ಆಟೆನ್‌ಬರೋ ಅವರ ಚಲನಚಿತ್ರ, ಅದರಲ್ಲಿ ಗಾಂಧಿಯ ಪಾತ್ರಕ್ಕೆ ಜೀವಕೊಟ್ಟ ಬೆನ್‌ಕಿಂಗ್‌ಸ್ಲೇ ಅಭಿನಯ ಮರೆಯಲಾಗದುದು. ಅದೊಂದು ಗಾಂಧಿಯನ್ನು ಕುರಿತ ಕಾವ್ಯ.

ಗಾಂಧಿಯಂತೆ ಕರ್ತವ್ಯವೇ ದೇವರು ಎಂದು ಬದುಕಿದ ಇವರು ಗಾಂಧಿಗಿಂತ ಕಡಿಮೆಯಾದವರೇನಲ್ಲ. ಇಲ್ಲಿ ಒಂದು ನೆನಪು. ನನ್ನ ಗುರುಗಳಾಗಿದ್ದ ಬುಡೇನ್ ಸಾಬ್ ಮಾಸ್ಟರ್ ಇವರು ಪ್ರೈಮರಿ ಶಾಲೆಯ ಮೇಷ್ಟರಾಗಿದ್ದರು. ಅವರು ೩೫ ವರ್ಷಗಳ ಇಡೀ ತಮ್ಮ ಸೇವಾವಧಿಯಲ್ಲಿ ಒಂದೇ ಒಂದು ದಿನ ಕೂಡಾ ಒಂದು ರಜೆಯನ್ನು ಬಳಸಿಕೊಳ್ಳಲಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಚಳ್ಳಕೆರೆಯಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಸಸ್ಯಶಾಸ್ತ್ರದ ಉಪನ್ಯಾಸಕಿಯಾಗಿದ್ದ ಶ್ರೀಮತಿ ಕಿರಣ್ಮಯಿ ನಾಗವಂದ್ ಎಂಬಾಕೆ ತಮ್ಮ ೧೦ ವರ್ಷಗಳ ಸೇವಾವಧಿಯಲ್ಲಿ ಒಂದೇ ಒಂದು ರಜೆಯನ್ನೂ ಬಳಸಲಿಲ್ಲ. ಅದನ್ನು ವ್ರತದಂತೆ ಪಾಲಿಸುತ್ತಾ ಬಂದಿದ್ದರು. ಒಮ್ಮೆ ಒಂದು ಅನಿರೀಕ್ಷಿತ ಸಂದರ್ಭದಲ್ಲಿ ಒಂದು ದಿನದ ರಜೆ ಹಾಕಲೇಬೇಕಾದ ಪ್ರಸಂಗ ಬಂದಿದ್ದಕ್ಕೆ ಕಣ್ಣಲ್ಲಿ ನೀರು ತಂದರು!

ನನ್ನ ಬಾಲ್ಯ ಗೆಳೆಯ, ಪೋಸ್ಟ್‌ಮಾಸ್ಟರ್ ಬುಡೇನ್ ಸಾಬ್ ಕೂಡಾ ನಿಸ್ಪೃಹಿ. ಪ್ರಾಮಾಣಿಕತೆಗೆ ಇನ್ನೊಂದು ಹೆಸರೆಂಬಂತೆ ತಮ್ಮ ಬದುಕಿನುದ್ದಕ್ಕೂ ಜನಗಳಿಗೆ ಪತ್ರ ತಲುಪಿಸುತ್ತಾ ಬದುಕಿದ. ಇವರು ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಹಿಂದೂ-ಮುಸ್ಲಿಂ ದೇವರಿಬ್ಬರನ್ನೂ ಪೂಜಿಸುವ, ಹಿಂದೂಗಳ ಹಬ್ಬಗಳನ್ನು ಆಚರಿಸುತ್ತಾ ಹೃದಯ ವೈಶಾಲ್ಯ ಮೆರೆಯುವ ಅವರ ನಡವಳಿಕೆ ಅನುಕರಣೀಯವಾದುದು.

ಇವರೆಲ್ಲಾ ನಾನು ಕಂಡ ನನ್ನ ಸುತ್ತಿನ ಗಾಂಧಿಗಳು. ನನ್ನ ಬದುಕಿನ ಸ್ಫೂರ್ತಿಯ ಚಿಲುಮೆಗಳು. ಗಾಂಧಿ ಸತ್ತಿಲ್ಲ. ಇವರೆಲ್ಲರಲ್ಲಿ ಗಾಂಧಿ ಬದುಕಿಯೇ ಇದ್ದಾರೆ. ಗಾಂಧೀಯಾನದಲ್ಲಿ ಇವರೆಲ್ಲಾ ಅಳಿಸಲಾಗದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ.

* ಪ್ರಯತ್ನ ನಮ್ಮದು; ಫಲ ದೇವರದು.




***

* ಯಾವುದೇ ಹೆಸರಿನಿಂದ ದೇವರನ್ನು ಕರೆದರೂ ಪ್ರೇಮಾಂಶವು ಕಂಡ ಕಡೆ ತಲೆಬಾಗಲೇಬೇಕು

***

ಪಾಪು ಗಾಂಧಿ
ಗಾಂಧಿ ಬಾಪು ಆದ ಕತೆ

ಬೊಳುವಾರು ಮಹಮದ್ ಕುಂಞ



ಬಾಲ್ಯದಲ್ಲಿ, ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗ ಅಧ್ಯಾಪಕರು ಮಹಾತ್ಮ ಗಾಂಧೀಜಿಯವರ ಬಗ್ಗೆ ಕತೆ ಹೇಳುತ್ತಿದ್ದರು. ಬ್ರಿಟಿಷರ ದಾಸ್ಯದಿಂದ ನಾವೆಲ್ಲ ಮುಕ್ತರಾಗಿ ಸ್ವತಂತ್ರ ದೇಶದ ಪ್ರಜೆಗಳಾದ ಆರಂಭದ ವರ್ಷಗಳು ಅವು. ನಾನು ಓದುತ್ತಿದ್ದ ಬೊಳುವಾರು ಪ್ರಾಥಮಿಕ ಶಾಲೆಯ ಹೆಡ್‌ಮಾಸ್ಟರ್ ಕೋಣೆಯ ಬಲಭಾಗದ ಗೋಡೆಯಲ್ಲಿ ಆಗ ಗಾಂಧೀಜಿಯವರ ಭಾವಚಿತ್ರವೊಂದು ತೂಗುತ್ತಿತ್ತು. ಅವರ ಬೋಳು ತಲೆ, ದೊಡ್ಡ ಕಿವಿಗಳು, ಉರುಟು ಕನ್ನಡಕದೆಡೆಯಿಂದ ಇಣುಕುತ್ತಿದ್ದ ಪ್ರೀತಿ ಸೂಸುವ ಅಪ್ಪನಂತಹ ಕಣ್ಣುಗಳು, ಬಿಳುಪು ಮೀಸೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಬರಿಮೈಗೆ ಸುತ್ತಿಕೊಂಡಿರುವ ಮೇಲುವಸ್ತ್ರ ಇವೆಲ್ಲವನ್ನೂ ಕುತೂಹಲದಿಂದ ನೋಡಿದ್ದ ನೆನಪು.

ಪ್ರತಿವರುಷವೂ ಶಾಲೆಯಲ್ಲಿ ಆಚರಿಸಲಾಗುತ್ತಿದ್ದ ಸ್ವಾತಂತ್ರ್ಯ ದಿನಾಚರಣೆ, ಪ್ರಜಾಪ್ರಭುತ್ವ ದಿನಾಚರಣೆ, ಗಾಂಧಿ ಜಯಂತಿ ಮತ್ತು ಜನವರಿ ಮೂವತ್ತರಂದು ಗಾಂಧೀಜಿಯ ಭಾವಚಿತ್ರಕ್ಕೆ

ಗೊಂಡೆ ಹೂವಿನ ಮಾಲೆ ಹಾಕಿ ಶಾಲೆಯೆದುರಿನ ಧ್ವಜಸ್ತಂಭದ ಕೆಳಗೆ ಸ್ಟೂಲಿನ ಮೇಲಿರಿಸಿ ನಮಗೆಲ್ಲ ನಮಸ್ಕರಿಸಲು ಹೇಳುತ್ತಿದ್ದರು. 'ಗಾಂಧೀಜಿಯವರು ಸಣ್ಣಂದಿನಿಂದಲೂ ಸತ್ಯ ಧರ್ಮ ನ್ಯಾಯದಲ್ಲಿ ನಡೆಯುತ್ತಿದ್ದರು. ಎಷ್ಟೇ ಕಷ್ಟವಾದರೂ ಸುಳ್ಳು ಹೇಳುತ್ತಿರಲಿಲ್ಲ' ಇತ್ಯಾದಿ ವಿವರಿಸುತ್ತಾ ಗಾಂಧೀಜಿಯವರ ಬಾಲ್ಯದ ಬಗ್ಗೆ ಪ್ರಚಲಿತವಿದ್ದ ಮೂರು ಮುಖ್ಯ ಘಟನೆಗಳನ್ನು ಹೇಳುತ್ತಿದ್ದರು. ಪರೀಕ್ಷೆಯಲ್ಲಿ ನಕಲು ಮಾಡಲು ಅವಕಾಶವಿದ್ದರೂ ನಿರಾಕರಿಸಿದ್ದು ಮೊದಲ ಘಟನೆಯಾದರೆ, ಸಿಗರೇಟು ಸೇದಿ ಮಾಂಸ ತಿಂದು ಪಶ್ಚಾತ್ತಾಪ ಪಟ್ಟಿದ್ದು ಎರಡನೆಯ ಘಟನೆ. ಇನ್ನು ಮೂರನೆಯದು: ಅವರ ಅಣ್ಣನೊಬ್ಬ ಬಂಗಾರದ ಕಡಗದ ತುಂಡನ್ನು ಮಾರಾಟ ಮಾಡಿದ್ದಾಗ ತಾನು ಪಶ್ಚಾತ್ತಾಪ ಪಟ್ಟು ತಂದೆಯಿಂದ ಕ್ಷಮೆಯಾಚಿಸಿದ್ದು. ಪ್ರಾಥಮಿಕ ಶಾಲೆಯಲ್ಲಿ ನಾನು ಓದಿದ ಏಳು ವರ್ಷಗಳಲ್ಲಿ ನಮ್ಮ ಗುರುಗಳು




ಗಾಂಧಿಜಿಯವರ ಬಗ್ಗೆ ನಮಗೆ ಮತ್ತೆ ಮತ್ತೆ ಹೇಳಿಕೊಟ್ಟ ಕತೆಗಳು ಇವು ಮೂರು ಮಾತ್ರ. ಪ್ರೌಢಶಾಲೆ ತಲುಪಿದ ನಂತರ ಗಾಂಧೀಜಿಯವರ ಬಗ್ಗೆ ಯಾರು ಯಾವ ಕತೆಯನ್ನೂ ಹೇಳಿಕೊಡಲಿಲ್ಲ. ಶಾಲೆಯ ವಾಚನಾಲಯದಲ್ಲಿ ಓದಿರುವ ಪುಸ್ತಕಗಳಲ್ಲೂ, ಈ ಮೂರು ಘಟನೆಗಳನ್ನು ಹೊರತುಪಡಿಸಿದರೆ ಅವರ ಬಾಲ್ಯದ ಬೇರೆ ಘಟನೆಗಳು ಇರಲಿಲ್ಲ. ಮುಂದೆ ಸುಮಾರು ನಲವತ್ತು ವರ್ಷಗಳ ಬಳಿಕ, ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಎಸ್.ಜಿ.ಸಿದ್ಧರಾಮಯ್ಯನವರ ಒತ್ತಾಯದಂತೆ ಮಕ್ಕಳಿಗಾಗಿ ಗಾಂಧೀಜಿಯವರ ಬಗ್ಗೆ ಕಾದಂಬರಿ ಬರೆಯಲು ಕೂತಾಗ ನನ್ನ ಮುಂದಿದ್ದ ನೆನಪುಗಳು ಇವು.

ಸ್ವತಂತ್ರ ಭಾರತ ಆರಂಭದ ದಿನಗಳಲ್ಲಿ ನಾವು ದೊಡ್ಡವರೆಲ್ಲ ಸೇರಿಕೊಂಡು ನಮ್ಮ ದೇಶದ ರಾಜರಸ್ತೆಗಳಿಗೆಲ್ಲ ಗಾಂಧೀ ಮಾರ್ಗವೆಂದು ಹೆಸರನ್ನೇನೋ ಇಟ್ಟೆವಾದರೂ ಕ್ರಮೇಣ ಆ ರಸ್ತೆಗಳಲ್ಲಿ ನಡೆದರೆ ಸುಖವಿಲ್ಲ ಎಂದು ಭಾವಿಸಿ. ನಯವಾಗಿ ಜಾರಬಲ್ಲ ಒಳದಾರಿಗಳನ್ನು ಬಳಸಿದ್ದು ಮಾತ್ರವಲ್ಲ. ನಮ್ಮ ಮಕ್ಕಳನ್ನೂ ಅದೇ ದಾರಿಯಲ್ಲಿ ಕೈ ಹಿಡಿದು ನಡೆಸಿಕೊಂಡು ಹೋಗತೊಡಗಿದೆವು. ಹಾಗಾಗಿ ನಮ್ಮ ಮಕ್ಕಳಿಗೆ ನಿಜವಾದ ಗಾಂಧಿಮಾರ್ಗದ

ಪರಿಚಯವಾಗಲಿಲ್ಲ. ಅವರಿಗೆ ಗೊತ್ತಿರುವುದೆಂದರೆ ಗಾಂಧೀಜಿಯೆಂದರೆ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಒಬ್ಬ ಮಹಾತ್ಮ; ಗಾಂಧಿ ಜಯಂತಿಯೆಂದರೆ ಅವರ ಹ್ಯಾಪಿ ಬರ್ತ್‌ಡೇ ಮತ್ತು ಗಾಂಧಿಮಾರ್ಗವೆಂದರೆ ಎಂ.ಜಿ.ರೋಡ್ ಅಷ್ಟೆ.

ನಾನು ಬಸ್ ಡ್ರೈವರನಾಗುತ್ತೇನೆ ಅಥವಾ ನರ್ಸ್ ಆಗುತ್ತೇನೆ ಎಂದು ತೊದಲುತ್ತಿರುವ ಮಕ್ಕಳನ್ನು ಹ್ಯಾಗಾದರೂ ಮಾಡಿ ಡಾಕ್ಟರ್ ಅಥವಾ ಇಂಜಿನಿಯರನ್ನಾಗಿಸಿಯೇ ಬಿಡುತ್ತೇವೆ ಎಂದು ಹರಕೆ ಹೊರುವ ನಮಗೆ, ಗಾಂಧೀಜಿಯವರ ಬಗ್ಗೆ ಮಕ್ಕಳಿಗೆ ಹೇಳಿಕೊಡಲೇಬೇಕೆಂಬ ತುರ್ತು ಇರುವುದಿಲ್ಲ. ಗಾಂಧೀಜಿಯವರ ಬಗ್ಗೆ ಓದಿಕೊಳ್ಳಲು ಬಯಸುವವರಿಗೆ ಕನ್ನಡ ನಾಡಿನ ಗ್ರಂಥಾಲಯಗಳಲ್ಲಿ ಪುಸ್ತಕಗಳಿಗೇನೂ ಬರವಿಲ್ಲ. ಈ ದೇಶದಲ್ಲಿ ಅಕ್ಷರ ಕಲಿತು ಪುಸ್ತಕ ಓದಬಲ್ಲ ಮಕ್ಕಳ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಗಾಂಧೀಜಿಯವರ ಬಗ್ಗೆ ಪುಸ್ತಕಗಳು, ಲೇಖನಗಳು ಪ್ರಕಟವಾಗಿವೆ. ಆದರೆ ಅವುಗಳಲ್ಲಿ ಬಹುಪಾಲು 'ಗಾಂಧೀ ವಿಚಾರ ಧಾರೆ'ಗೆ ಸಂಬಂಧಿಸಿದವುಗಳಾಗಿರುವುದರಿಂದ ಅವು ಸಹಜವಾಗಿ ಮಕ್ಕಳನ್ನು ಆಕರ್ಷಿಸುವುದಿಲ್ಲ. ಗಾಂಧೀಜಿಯವರು ಸ್ವತಃ ಬರೆದ ಅವರ ಬಲು ಪ್ರಸಿದ್ಧ ಆತ್ಮಕತೆಯಲ್ಲೂ ಕಾಣಿಸಿಕೊಳ್ಳುವ ಅವರ ಬಾಲ್ಯದ ಮುಖ್ಯ ಘಟನೆಗಳು ಈ ಮೊದಲೇ ಹೇಳಿದ ಮೂರು ಮಾತ್ರ.

ಮಕ್ಕಳಿಗೆ ಯಾವುದೇ ಪುಸ್ತಕ ಇಷ್ಟವಾಗಬೇಕಾದರೆ ಆ ಪುಸ್ತಕದಲ್ಲಿ ಪ್ರಾಣಿ ಪಕ್ಷಿಗಳ ಜೊತೆಗೆ ಮಕ್ಕಳಂತೆಯೇ ಇರುವ ಕೆಲವಾದರೂ ಪಾತ್ರಗಳು ಇರಬೇಕಾಗುತ್ತದೆ. ನಾಡು ನುಡಿಗೆ ಹೋರಾಟ, ದೇಶಕ್ಕಾಗಿ ಪ್ರಾಣತ್ಯಾಗ ಇತ್ಯಾದಿ ಸಂಗತಿಗಳು ದೊಡ್ಡವರ ಪರಿಧಿಗೆ ಸೇರಿದವುಗಳು. ಸುಮಾರು ಹತ್ತು ವರ್ಷಗಳ ಹಿಂದೆ, ಕನ್ನಡದಲ್ಲಿ ಮುದ್ರಣ ಯುಗ ಆರಂಭವಾದನಂತರ ಮುಂದಿನ ಒಂದು ಶತಮಾನದಲ್ಲಿ ಪ್ರಕಟವಾಗಿದ್ದ ಮಕ್ಕಳ ಪದ್ಯಗಳ 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಗ್ರಂಥವನ್ನು ಡಾ.ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಸಂಪಾದಿಸುತ್ತಿರುವಾಗ ನಾನು ಕಲಿತ ಪಾಠ ಇದು. ಅಂತೆಯೇ, ನಮಗೆ ಆದರ್ಶಪ್ರಾಯವೆಂದು ನಾವು ಮಕ್ಕಳಿಗೆ ಉದಾಹರಿಸಬಲ್ಲ ಪುರಾಣದ




ಪಾತ್ರಗಳಾಗಲೀ, ಚಾರಿತ್ರಿಕ ವ್ಯಕ್ತಿಗಳಾಗಲೀ ಸಾಮಾನ್ಯವಾಗಿ ನಮ್ಮಂತೆ ಇರುವುದಿಲ್ಲ. ಅವರು ಒಂದೋ ಅತಿಮಾನುಷರಾಗಿರುತ್ತಾರೆ ಅಥವಾ ನಾವೆಂದೂ ತಲುಪಲಾಗದ ಎತ್ತರದಲ್ಲಿ ಅದಾಗಲೇ ಕೂತುಬಿಟ್ಟಿರುತ್ತಾರೆ. ಆದ್ದರಿಂದಲೇ ಅವರಂತೆ ಆಗಲು ನಮ್ಮಿಂದ ಸಾಧ್ಯವೇ ಇಲ್ಲವೆಂಬ ಪೂರ್ವಾಗ್ರಹ ಅಥವಾ ಪಲಾಯನವಾದ ನಮ್ಮೊಳಗಿರುತ್ತದೆ. ನಾವು ಇದೇ ಪಲಾಯನವಾದವನ್ನು ನಮಗರಿವಿಲ್ಲದೇ ನಮ್ಮ ಮಕ್ಕಳ ಮೆದುಳಿಗೆ ಅಂಟಿಸಿಬಿಡುತ್ತೇವೆ. ನಾನು ಗಾಂಧೀಜಿ ಬಗ್ಗೆ ಬರೆಯಲು ಹೊರಟಾಗ ನನ್ನೆದುರಿಗಿದ್ದ ಎಚ್ಚರಿಕೆ ಇದು.

ಬರೆಯಲು ಒಪ್ಪಿಕೊಂಡ ಬಳಿಕದ ಮೊದಲ ಒಂದು ವರ್ಷದಲ್ಲಿ ಯಾವುದೇ ಸಿದ್ಧ ಸೂತ್ರಗಳಿಗೆ ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ನಾನು ಅದಾಗಲೇ ಒಪ್ಪಿಕೊಂಡಿದ್ದ ಯಾವುದೇ ನಿಲುವುಗಳಿಗೆ ಬದ್ಧನಾಗದೆ ಗಾಂಧಿಯನ್ನು ಮತ್ತೊಮ್ಮೆ ಓದಿದೆ. ಆ ಬಳಿಕ ಗಾಂಧೀಜಿಯವರ ಜೀವನದ ಒಟ್ಟು ಘಟನೆಗಳನ್ನು ಸುಮಾರು ಇನ್ನೂರು ಪುಟಗಳಷ್ಟು ಬರೆದಿಟ್ಟುಕೊಂಡೆ. ನಂತರ ಗಾಂಧೀಜಿಯವರ ದೊಡ್ಡ ವ್ಯಕ್ತಿತ್ವಕ್ಕೆ ಅಪಚಾರವಾಗಬಲ್ಲ, ಮಹಾತ್ಮನ ಗೌರವಕ್ಕೆ ಕುಂದುಂಟುಮಾಡಬಲ್ಲ ಯಾವ ಸಂಗತಿಗಳನ್ನೂ, ಅದು ಸತ್ಯಕ್ಕೆ ಮಾಡುವ ಅಪಚಾರವೇ ಆದರೂ, ನನ್ನ ಈ ಬರವಣಿಗೆಯಲ್ಲಿ ಸೇರಿಸಿಕೊಳ್ಳಬಾರದು ಎಂಬ ಕಾರಣಕ್ಕೆ ಕೆಲವೊಂದು ಭಾಗಗಳನ್ನು ತೆಗೆದುಹಾಕಿದೆ. ಗಾಂಧೀಜಿಯವರ ಬಾಲ್ಯದ ಮುಖ್ಯ ಮೂರು ಕತೆಗಳು ಕೇವಲ ಇಪ್ಪತ್ತು ಪುಟದಲ್ಲಿ ಮುಗಿದು ಹೋಗುವುದು ಗಮನಕ್ಕೆ ಬಂದಾಗ, ಅವರ ಆತ್ಮಕತೆಯಲ್ಲಿ ಬರುವ ಕೆಲವು ಸಾಲುಗಳನ್ನು ಮಕ್ಕಳಿಗೆ ಇಷ್ಟವಾಗುವಂತಹ ಘಟನೆಗಳಾಗಿ ವಿಸ್ತರಿಸಿ ಕತೆ ಬರೆದೆ. ಜೊತೆಯಲ್ಲಿ ಗಾಂಧೀಜಿಯವರ ವಿಚಾರಧಾರೆಗೆ ಕಾರಣವಾಗಿರುವ ಕೆಲವು ಸಂಗತಿಳಿಗೆ ಕತೆಯ ರೂಪ ನೀಡಿದೆ. 'ಮೋನುವಿನ ಉಪವಾಸ', 'ಅಳುವಿನ ಕಾರಣ', 'ಕಾಗದದ ಬಾಣ', 'ನಗುವಿನ ಕಾರಣ', 'ಮುಟ್ಟುವ ಆಟ' 'ಯುಗಪುರುಷನ ಯುಗಳ' ಮೊದಲಾದ ಕಥಾಭಾಗಗಳು ಈ ಬಗೆಯವು.

ಬರೆಯುತ್ತಿರುವಂತೆಯೇ ಒಟ್ಟು ಕೃತಿಯನ್ನು ತಲಾ ಅರವತ್ತು ಪುಟಗಳ ಮೂರು ವಿಭಾಗಗಳಾಗಿ ವಿಂಗಡಿಸಲು ಸಾಧ್ಯವಾಗುವಂತೆ ಬರಹವನ್ನು ಸಿದ್ಧಪಡಿಸಿದೆ. ಮೊದಲ 'ಪಾಪು' ಭಾಗದ ಬರವಣಿಗೆಯ ಭಾಷೆಯನ್ನು ಪ್ರಾಥಮಿಕ ಶಾಲಾ ತರಗತಿಯಲ್ಲಿ ಓದುತ್ತಿರುವ ಮಕ್ಕಳನ್ನು ತಟ್ಟುವಂತೆಯೂ, ಎರಡನೆಯ 'ಗಾಂಧಿ' ಭಾಗದ ಭಾಷೆಯನ್ನು ಮಾಧ್ಯಮಿಕ ತರಗತಿಯ ಮಕ್ಕಳಿಗೆ ಮುಟ್ಟುವಂತೆಯೂ, ಮೂರನೆಯ ಮತ್ತು ಕೊನೆಯ 'ಬಾಪು' ಭಾಗವನ್ನು ಪ್ರೌಢಶಾಲಾ ಮಕ್ಕಳಿಗೆ ಅರ್ಥವಾಗುವಂತೆಯೂ ಬರೆದೆ. ಮೊದಲ ಭಾಗವನ್ನು ಓದಿ ಮುಗಿಸುವ

ಹೊತ್ತಿಗೇ ಆ ವಿದ್ಯಾರ್ಥಿಗೆ ಕನ್ನಡ ಓದಿನ ಬಗ್ಗೆ ಒಂದಿಷ್ಟು ಹಿಡಿತ ಸಿಕ್ಕಿರುತ್ತದೆಯಾದ್ದರಿಂದ ಎರಡನೆಯ ಮತ್ತು ಮೂರನೆಯ ಭಾಗಕ್ಕೆ ಪ್ರವೇಶ ಮಾಡಲು ಸಾಧ್ಯವಾಗುವಂತೆ ಭಾಷೆಯನ್ನು ನಿಧಾನವಾಗಿ ಏರಿಸುತ್ತಾ ಹೋದೆ. [ತಮಾಷೆಯ ಸಂಗತಿಯೆಂದರೆ ನನ್ನನ್ನೂ ಸೇರಿದಂತೆ, ಕೆಲವು ಹಿರಿಯರ ಗಾಂಧಿ ಓದಿನ ಪ್ರವೇಶಕ್ಕೆ ಈ ಕೃತಿಯೇ ಹೇತುವಾದದ್ದು. ಪ್ರಕಟವಾದ ಮೊದಲ ವರ್ಷದಲ್ಲೇ ಈ ಕೃತಿ ಎರಡು ಮುದ್ರಣ, ನಾಲ್ಕು ವರ್ಷಗಳಲ್ಲಿ ನಾಲ್ಕು ಮುದ್ರಣ ಕಾಣಲು ಇವರೇ ಕಾರಣ.]



ಒಟ್ಟಿನಲ್ಲಿ ಮಕ್ಕಳಿಗೆ ಮಹಾತ್ಮ ಗಾಂಧಿಯೆಂದರೆ ಯಾರಿಗೂ ನಿಲುಕದ ಅತಿಮಾನವನಲ್ಲ, ಸುಮಾರು ನೂರಿಪ್ಪತ್ತೈದು ವರ್ಷಗಳ ಹಿಂದೆ ಎಲ್ಲ ಮಕ್ಕಳಂತೆಯೇ ಹುಟ್ಟಿ, ಎಲ್ಲ ಮಕ್ಕಳಂತೆಯೇ ಬೆಳೆದ ಸಾಮಾನ್ಯ ಮಗುವಾಗಿದ್ದವನು; ಎಲ್ಲರಂತೆಯೇ ಅಪ್ಪ ಅಮ್ಮನ ಮುದ್ದಿನ ಪಾಪುವಾಗಿದ್ದವನು; ಶಾಲೆಗೆ ಸೇರಿ, ಆಟವಾಡಿ, ಪಾಠ ಓದಿ, ಪರೀಕ್ಷೆ ಬರೆದು ಪಾಸಾಗಿ ದೊಡ್ಡ ವಕೀಲನಾಗಿದ್ದವನು; ಕಷ್ಟದಲ್ಲಿದ್ದವರ ಬಗ್ಗೆ ಸದಾ ಮರುಗುವ, ಸುಳ್ಳು ಮತ್ತು ಅನ್ಯಾಯಗಳ ವಿರುದ್ಧ ಎದೆಗುಂದದೆ ಹೋರಾಡಿದ ಯುವಕನಾಗಿದ್ದವನು; ಸಾಮಾನ್ಯ ಮನುಷ್ಯನೊಬ್ಬ ಪರಿಪೂರ್ಣ ಮನುಷ್ಯನಾಗಲು, ಮಹಾತ್ಮನೆಂದು ಕರೆಸಿಕೊಳ್ಳಲು ಹೇಗೆ ಬದುಕಿ ಬಾಳಬೇಕು ಎಂಬುದಕ್ಕೆ ಮಾದರಿಯಾದ ಅಜ್ಜನಾಗಿದ್ದವನು; ಪ್ರಯತ್ನ ಪಟ್ಟರೆ ಎಲ್ಲ ಮಕ್ಕಳೂ ಗಾಂಧೀಜಿಯಂತಾಗಬಹುದು ಎಂದಷ್ಟೇ ತಿಳಿಸಿಕೊಡುವ ಪ್ರಯತ್ನ ಈ 'ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ'.

ಈ ಕೃತಿಯನ್ನು ಓದಿದ ಬಳಿಕ ಒಂದಷ್ಟು ಮಕ್ಕಳಿಗಾದರೂ, ತಾವು ದೊಡ್ಡವರಾದ ಮೇಲೆ ಗಾಂಧೀಜಿಯವರ ಬಗ್ಗೆ ಇನ್ನಷ್ಟು ಓದಿ ತಿಳಿದುಕೊಳ್ಳಬೇಕೆಂಬ ಕುತೂಹಲ ಹುಟ್ಟಿದರೆ ನನಗೆ ಸಂತೋಷ. ಶಾಲಾ ಶಿಕ್ಷಕರು ಮತ್ತು ಮಕ್ಕಳ ಹೆತ್ತವರು ಈ ಪುಸ್ತಕವನ್ನು ಮಕ್ಕಳಿಗೆ ಓದಿ ಹೇಳಿದರೆ ನನ್ನ ಸಂತೋಷ ಹೆಚ್ಚಾಗುತ್ತದೆ. ಹಾಗಾಗದೆ ಹೋದರೂ, ಈ ಕೃತಿಯನ್ನು ಬರೆಯುವ ಕಾರಣದಿಂದ ಗಾಂಧೀಜಿಯವರನ್ನು ಮತ್ತೊಮ್ಮೆ ಸರಿಯಾಗಿ ಓದಿಕೊಂಡ ಸಂತೋಷವಂತೂ ನನಗೆ ಇದ್ದೇ ಇದೆ.

ನೌಖಾಲಿ : ಗಾಂಧೀ ಪ್ರಯೋಗ

ಪ್ರೊ. ಎಂ. ಜಿ. ಚಂದ್ರಶೇಖರಯ್ಯ


ಅದು ೧೯೪೬ನೇ ವರ್ಷ. ಈಗಿನ ಬಾಂಗ್ಲಾ ದೇಶಕ್ಕೆ ಸೇರಿರುವ ನೌಖಾಲಿಯಲ್ಲಿ ಎಂದೆಂದೂ ಕಂಡು ಕೇಳರಿಯದ ಭೀಕರ ಕೋಮುಗಲಭೆ ನಡೆದಿತ್ತು. ಹಿಂದೂಗಳು ಅಲ್ಪಸಂಖ್ಯಾತರಾಗಿರುವ ಗ್ರಾಮ, ಪಟ್ಟಣಗಳಲ್ಲಿ ಮುಸಲ್ಮಾನರು, ಮುಸಲ್ಮಾನರು ಅಲ್ಪಸಂಖ್ಯಾತರಾಗಿರುವ ಗ್ರಾಮ, ಪಟ್ಟಣಗಳಲ್ಲಿ ಹಿಂದೂಗಳು ಕೊಲೆ, ಸುಲಿಗೆ, ಲೂಟಿ, ಅತ್ಯಾಚಾರದಲ್ಲಿ ತೊಡಗಿದ್ದರು. ಸಾವಿರಾರು ಜನರು ಪ್ರಾಣ ಕಳೆದುಕೊಂಡರೆ, ಸಾವಿರಾರು ಸ್ತ್ರೀಯರು ಅತ್ಯಾಚಾರಕ್ಕೆ ಒಳಗಾಗಿದ್ದರು. ಲೆಕ್ಕವಿರದಷ್ಟು ಮನೆಗಳು ಬೆಂಕಿಗೆ ಆಹುತಿಯಾದ್ದುವು. ಎಲ್ಲೆಲ್ಲೂ ದೌರ್ಜನ್ಯದ ಅಟ್ಟಹಾಸವೇ ನಡೆದಿತ್ತು. ಇಂತಹ ಸಂಕಟದ ಕಾಲದಲ್ಲಿ ನೊಂದವರ ಕಣ್ಣೀರು ತೊಡೆಯುವ, ಸಾಂತ್ವನ ಹೇಳುವ ಕೆಲಸಕ್ಕೆ ಬ್ರಿಟಿಷ್ ಸರ್ಕಾರ ಮುಂದಾಗಿರಲಿಲ್ಲ. ಹಿಂದೂ ಮುಸಲ್ಮಾನ ಕೋಮುವಾದಿಗಳು ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದರು. ರಾಜಕೀಯ ನಾಯಕರು ಪರಿಸ್ಥಿತಿಯ ಲಾಭ ಪಡೆಯುವ ಲೆಕ್ಕಾಚಾರದಲ್ಲಿದ್ದರು.

ಇಂತಹ ಮಾನವೀಯ ಸಂದರ್ಭದಲ್ಲಿ ನೊಂದವರ ನೆರವಿಗೆ ಧಾವಿಸಿ ಹೋಗುವ ನಿರ್ಧಾರಕ್ಕೆ ಬಂದರು ಗಾಂಧಿ. ಆಗ ಅವರಿಗೆ ೭೭ ವರ್ಷ. ಆಗತಾನೆ ಅವರು ಬಂಗಾಳಿ ಭಾಷೆಯನ್ನು ಕಲಿಯುತ್ತಿದ್ದರು. ನೌಖಾಲಿಗೆ ಹೊರಡಲು ಸಿದ್ಧರಾದ ಗಾಂಧಿ ತಮ್ಮೊಂದಿಗೆ ಕರೆದೊಯ್ಯಲು ಚಿಕ್ಕ ಸಂಘವೊಂದನ್ನು ರಚಿಸಿಕೊಂಡರು. ಕೋಮುಗಲಭೆಯಿಂದ ತತ್ತರಿಸಿ ಹೋಗಿರುವ ನೌಖಾಲಿಗೆ ಹೊರಟಿರುವ ಗಾಂಧಿಯವರೊಂದಿಗೆ ಹೋಗಲು

ಬಹಳ ಜನ ಮುಂದೆ ಬಂದರೂ ಗಾಂಧಿ ದೊಡ್ಡ ದಂಡಿನೊಂದಿಗೆ ಹೋಗಲು ನಿರಾಕರಿಸಿ, ಅವರನ್ನು ಹಿಂದಕ್ಕೆ ಕಳುಹಿಸಿದರು. ಗಾಂಧಿಯವರು ನೌಖಾಲಿಗೆ ಹೋದರೆ ಮಾತ್ರ ಕೋಮು ಗಲಭೆ ನಿಯಂತ್ರಣಕ್ಕೆ ಬರಲು ಸಾಧ್ಯವೆಂದು ತಿಳಿದಿದ್ದ ಆಳುವ ಬ್ರಿಟಿಷ್ ಸರಕಾರ ಗಾಂಧಿಯವರ ರಕ್ಷಣೆಗೆ ಬೆಂಗಾವಲು ಪಡೆಯನ್ನು ಕಳುಹಿಸುವ ತೀರ್ಮಾನಕ್ಕೆ ಬಂದಿತು. ದೇಶಬಾಂಧವರನ್ನು ನೋಡಲು, ಅವರಿಗೆ ಸಾಂತ್ವನ ನೀಡಲು ಹೋಗುತ್ತಿರುವ ತಮಗೆ ಹಾಗೂ ತಮ್ಮ ಗುಂಪಿನ ಸದಸ್ಯರಿಗೆ ಸರ್ಕಾರಿ ಪಡೆಗಳು ರಕ್ಷಣೆ ನೀಡುವ ಅಗತ್ಯವಿಲ್ಲವೆಂದು ಗಾಂಧಿಯವರು ಬ್ರಿಟಿಷರಿಗೆ ತಿಳಿಸಿದರು ಹಾಗೂ ಕನಿಷ್ಠ ಅಗತ್ಯ ವಸ್ತುಗಳನ್ನು ಮಾತ್ರ ತೆಗೆದುಕೊಂಡು ತೀರ ಸರಳವಾಗಿ ನೊಂದವರನ್ನು ಭೇಟಿ ಮಾಡಲು ಹೊರಟರು.

ಅದು ಡಿಸೆಂಬರ್ ತಿಂಗಳು. ಕೊರೆಯುವ ಚಳಿ. ಗಾಂಧಿಯವರದೇ ಕನಿಷ್ಠ ಉಡುಪು. ಜೊತೆಗೆ ೭೭ ವರ್ಷಗಳ ಗಾಂಧಿ ಬರಿಗಾಲಲ್ಲಿ ನಡೆದು ಕೋಮು ಗಲಭೆ ಪೀಡಿತ ಪ್ರದೇಶದಲ್ಲಿ ಹಳ್ಳಿಯಿಂದ ಹಳ್ಳಿಗೆ ಹೋಗಲು ತೀರ್ಮಾನಿಸಿದ್ದರು. ಬಡವರನ್ನು, ನೊಂದವರನ್ನು ಜನತಾ ಜನಾರ್ದನರೆಂದೇ ತಿಳಿದ ಅವರಿಗೆ ಚಪ್ಪಲಿ ತೊಟ್ಟು ಹೋಗುವ ಮನಸ್ಸಾಗಲಿಲ್ಲ. ದೇವಸ್ಥಾನದೊಳಗೆ ಚಪ್ಪಲಿ ಹಾಕಿಕೊಂಡು ಯಾರೂ ಹೋಗುವುದಿಲ್ಲ. ಹಾಗೆಯೇ ಜನತಾ ಜನಾರ್ದನನ ಮನೆಗೆ ನಾನು ಚಪ್ಪಲಿ ಮೆಟ್ಟಿಕೊಂಡು ಹೋಗಲಾರೆ ಎಂದು ಅವರು ತಿಳಿಸಿದರು.

ಗಲಭೆ ಪೀಡಿತ ಪ್ರದೇಶದಲ್ಲಿ ಗಾಂಧಿಯವರೊಂದಿಗೆ ಪಾದಯಾತ್ರೆಯಲ್ಲಿ ಬರುತ್ತಿದ್ದವರೆಲ್ಲರೂ ಸರಳ ಜೀವನ ಪಾಲಿಸುವುದಾಗಿ ಮಾತುಕೊಟ್ಟಿದ್ದರು. ಎಷ್ಟೇ ಪ್ರಚೋದನೆಯಿದ್ದರೂ ಯಾರೂ ಆವೇಶಕ್ಕೊಳಗಾಗದಂತೆ ಸಹಯಾತ್ರಿಕರನ್ನು ಗಾಂಧಿ ಎಚ್ಚರಿಸಿದ್ದರು. ಹೀಗಾಗಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವಾಗ ಭಜನೆ ಮಾಡುತ್ತ ಎಲ್ಲರೂ ಸಾಗುತ್ತಿದ್ದರು. ಯಾವುದೇ ಗ್ರಾಮಕ್ಕೆ ಹೋದರೂ ಅಲ್ಲಿನ ದೇವಾಲಯ, ಶಾಲೆ ಅಥವಾ ಯಾವುದಾದರೂ ಸಾರ್ವಜನಿಕ ಕಟ್ಟಡದಲ್ಲಿ ಇಲ್ಲವೆ ಡೇರೆಗಳಲ್ಲಿ ಯಾತ್ರಿಕರು ಉಳಿಯುತ್ತಿದ್ದರು. ಒಮ್ಮೆ ಯಾವುದೋ ಊರಿಗೆ ಯಾತ್ರಿಕರು ನಡೆದು ಹೋಗುತ್ತಿದ್ದಾಗ ಮುಂದಿನ ಊರ



ಕೋಮುವಾದಿಗಳಾದ ಕೆಲವು ಮುಸಲ್ಮಾನರು ರಸ್ತೆಯ ತುಂಬ ಕಕ್ಕಸ್ಸು, ಗಾಜಿನ ಚೂರುಗಳನ್ನು ಹಾಕಿರುವುದು ಕಂಡುಬಂದಿತು. ಇವರು ತಮ್ಮೂರಿಗೆ ಬಾರದಿರಲಿ ಎಂಬುದು ಅವರ ಉದ್ದೇಶವಾಗಿತ್ತು. ರಸ್ತೆಯ ತುಂಬ ಮಲ, ಗಾಜನ್ನು ಹಾಕಿರುವುದರ ಉದ್ದೇಶ ಅರಿತ ಗಾಂಧಿಯವರು ಮರದಿಂದ ಸಣ್ಣ ಸಣ್ಣ ರೆಂಬೆಗಳನ್ನು ಮುರಿದುಕೊಂಡು. ಅದನ್ನೇ ಪೊರಕೆಯಂತೆ ಕಟ್ಟಿಕೊಂಡು ರಸ್ತೆಯ ಮೇಲಿದ್ದ ಗಾಜು, ಮಲವನ್ನೆಲ್ಲ ಗುಡಿಸಿ, ಆಚೆಗೆ ಹಾಕಿ ಮುಂದೆ ಸಾಗಿದರು. ಅಷ್ಟೇ ಅಲ್ಲ ಅದೇ ಊರಿಗೆ ಹೋಗಿ, ಅಲ್ಲಿನ ಪ್ರತಿಯೊಂದು ಮನೆಮನೆಗೂ ಭೇಟಿ ನೀಡಿ, ಮಾನವೀಯತೆ ಮರೆತು ಕಚ್ಚಾಡದಂತೆ, ಎಲ್ಲರೂ ಒಂದಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡೋಣ ಬನ್ನಿ ಎಂದು ಪ್ರೀತಿಯಿಂದ ಆಹ್ವಾನಿಸಿದರು. ಗಾಂಧಿಯವರು ಆ ಊರಿಗೆ ಹೋಗಿ ಎಷ್ಟೋ ಹೊತ್ತು ಕಳೆದಿದ್ದರೂ ಯಾರೊಬ್ಬರೂ ಅವರನ್ನು ಭೇಟಿಯಾಗಲು ಬಂದಿರಲಿಲ್ಲ. ಒಂದು ರೀತಿಯಲ್ಲಿ ಎಲ್ಲರೂ ಅವರನ್ನು ಬಹಿಷ್ಕರಿಸಿದಂತಿತ್ತು. ಆದರೆ ಸತ್ಯಾಗ್ರಹಿ ಗಾಂಧಿಯವರು ಊರಿನ ಎಲ್ಲ ಮುಸಲ್ಮಾನರನ್ನು ಅವರ ಮನೆಗಳಿಗೆ ಹೋಗಿ ಭೇಟಿ ಮಾಡಿ ಬಂದ ನಂತರ ಅವರು ಒಬ್ಬೊಬ್ಬರಾಗಿ ಬಂದು ಕ್ಷಮಿಸುವಂತೆ ಕೇಳಿಕೊಂಡರು. ಆ ಊರಿನಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂಗಳಲ್ಲಿ ಎಷ್ಟೋ ಜನರು ಕೊಲೆಯಾಗಿದ್ದರು. ಉಳಿದವರು ಊರು ತೊರೆದು ಓಡಿಹೋಗಿದ್ದರು. ಹಿಂದೂಗಳ ಮನೆಗಳೆಲ್ಲ ಬೆಂಕಿಗೆ ಆಹುತಿಯಾಗಿದ್ದವು. ಅಲ್ಪಸಂಖ್ಯಾತರಾಗಿದ್ದ ಮುಸಲ್ಮಾನರ ಮೇಲೆ ಹಿಂದೂಗಳು ಕೂಡ ಹೀಗೇ ನಡೆದುಕೊಂಡಿದ್ದರು. ಗಾಂಧಿಯವರ ನಿರ್ವ್ಯಾಜ ಪ್ರೀತಿಗೆ ಕರಗಿದ ಅಲ್ಲಿನ ಜನರು ತಾವು ಸೋದರರಂತೆ ಬಾಳುವುದಾಗಿ ಮಾತುಕೊಟ್ಟರು ಹಾಗೂ ಹಾಗೆಯೇ ನಡೆದುಕೊಂಡರು. ಸರ್ಕಾರಿ ಪಡೆಗಳು, ಸೇನೆ ಕೂಡ ಶಾಂತಿ ಸ್ಥಾಪನೆ ಮಾಡುವಲ್ಲಿ ಸೋತು ಹೋಗಿದ್ದ ಕಡೆ ಗಾಂಧಿಯವರ ಪಾದಯಾತ್ರೆ ಫಲ ನೀಡಿತು.




ಆ ಸಂದರ್ಭದಲ್ಲಿ ಗಾಂಧಿಯವರ ಮೈ ಮನಸ್ಸುಗಳು ಜರ್ಝರಿತವಾಗಿದ್ದವು. ಕೊರೆಯುವ

ಚಳಿಗೆ ಗಾಂಧಿಯವರ ಪಾದಗಳು ಬಿರುಕು ಬಿಟ್ಟು ರಕ್ತಸ್ರಾವವಾಗುತ್ತಿತ್ತು. ಗಾಂಧಿಯವರ ಸಹಾಯಕಿಯಾಗಿದ್ದ ಮನು ಬೆಹನ್ ಗಾಂಧೀಜಿಯವರ ಪಾದಗಳಿಗೆ ವ್ಯಾಸಲಿನ್ ಲೇಪಿಸಲು ಮುಂದಾದಾಗ ಅವರು ಅದನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ಜನರು ಕೋಮುಗಲಭೆಯಿಂದ ನೊಂದು ಬೆಂದಿರುವಾಗ ನನಗೆ ಯಾವ ಸುಖಸಾಧನಗಳೂ ಬೇಡವೆಂದು ಗಾಂಧಿ ತಿಳಿದರು. ಪಾದಯಾತ್ರೆ ಮಾಡುತ್ತಿರುವ ತಂಡದ ಸದಸ್ಯರಿಗೆ ಸರಳ ಆಹಾರ ತಯಾರಿಸಲು ಹರಿಜನ ಅಡಿಗೆಯವನನ್ನು ಕರೆಸಿಕೊಂಡಿದ್ದರು.

ಈ ಪ್ರಸಂಗವನ್ನು ಕುರಿತು ಬರೆದಿರುವ ಮನು ಬೆಹನ್ ಒಂದು ಸೋಜಿಗದ ಪ್ರಸಂಗವನ್ನು ಪ್ರಸ್ತಾಪಿಸಿದ್ದಾರೆ. ಗಾಂಧಿಯವರು ಬಳಸುತ್ತಿದ್ದ ಕರವಸ್ತ್ರ ತುಂಬ ಸವೆದು ಜೀರ್ಣಾವಸ್ಥೆ ತಲುಪಿತ್ತು. ಮೇಲಾಗಿ ಅದು ಖಾದಿವಸ್ತ್ರ, ಉರುಟುರುಟಾದ ಜಾಳು ಜಾಳಾದ ವಸ್ತ್ರ ಬೇರೆ. ಬಳಸಿ ಬಳಸಿ ಹರಿದಿತ್ತು. ಇದನ್ನೂ ಕಂಡ ಮನು 'ಬಾಪೂಜಿ, ನಿಮಗಾಗಿಯೇ ನಾನು ನೂಲು ತೆಗೆದು ಬಟ್ಟೆ ನೆಯ್ದು ಕರವಸ್ತ್ರ ಸಿದ್ಧ ಮಾಡಿದ್ದೇನೆ. ತಾವು ಈ ಹಳೆಯದನ್ನು ಆಚೆ ಎಸೆಯಿರಿ, ನಿಮಗೆ ನಾನು ಹೊಸ ಕರವಸ್ತ್ರ ಕೊಡುವೆನು' ಎಂದು ವಿನಂತಿಸುವರು. ಆಗ ಗಾಂಧಿಯವರು ಆಕೆಯಿಂದ ಸೂಜಿ, ದಾರವನ್ನು ಪಡೆದು ಜೀರ್ಣವಾಗಿದ್ದ ಕರವಸ್ತ್ರವನ್ನು ಹೊಲಿಯುತ್ತಾರೆ. ಸುಮಾರು ಅರ್ಧಗಂಟೆ ಮನಸ್ಸಿಟ್ಟು ಆ ಕೆಲಸ ಮಾಡಿ ಮುಗಿಸುತ್ತಾರೆ. ಹೊಲಿದು ಮುಗಿಸಿದ ನಂತರ ಗಾಂಧಿಯವರ ಕೈಯಿಂದ ಆ ಕರವಸ್ತ್ರವನ್ನು ತೆಗೆದುಕೊಂಡು ನೋಡಿ ಆಕೆ ಆಶ್ಚರ್ಯಭರಿತಳಾಗಿ ಉದ್ಗರಿಸುತ್ತಾಳೆ: ಈ ಚಿಂದಿಯಂತಹ ಬಟ್ಟೆಯನ್ನು ಹೊಸದೆಂಬಂತೆ ಹೊಲಿಯಲು ಸಾಧ್ಯವಾದ ಈ ಬಾಪುಗೆ ಮಾತ್ರ ಜಾತಿ, ಕೋಮು, ಮತದಿಂದ ಛಿದ್ರಗೊಂಡಿರುವ ಈ ದೇಶವನ್ನು ಹೀಗೆ ಪ್ರೀತಿಸಲು, ಒಂದಾಗಿ ಹಿಡಿದಿಟ್ಟುಕೊಂಡಿರಲು ಸಾಧ್ಯ.

ಈಚೆಗೆ ನಮ್ಮಲ್ಲಿ ನಡೆಯುತ್ತಿರುವ ಪಾದಯಾತ್ರೆಗಳನ್ನು ಕಂಡಾಗ ಹಾಗೇ ಈ ಪ್ರಸಂಗ ನೆನಪಾಯಿತು.



“ನಮ್ಮಜ್ಜ ಹೋದ ಮೇಲೆ ಎಲ್ಲವನ್ನೂ ತಿಪ್ಪೆಗಾಕ್ದೆ”

ಅಪ್ಪಗೆರೆ ತಿಮ್ಮರಾಜು

“ನಮ್ಮಜ್ಜ ಹೋದ ಮೇಲೆ ಎಲ್ಲವನ್ನು ತಿಪ್ಪೆಗಾಕ್ದೆ” ಎಂಬ ಹಳ್ಳಿಯ ಮಾತಿದೆ. ಅದೇ ರೀತಿ ಗಾಂಧಿ ಹೋದ ಮೇಲೆ ನಾವು ಏನು ಮಾಡುತ್ತಿದ್ದೇವೆ ಎಂಬ ಪ್ರಶ್ನೆ ನಮ್ಮ ಮುಂದಿದೆ.

ಗಾಂಧಿ ಒಬ್ಬ ಮಹಾನ್ ವ್ಯಕ್ತಿ ಮಾತ್ರವಲ್ಲ, ಮಾನವ ಕುಲಕ್ಕೆ ಭಗವಂತ ಹಚ್ಚಿದ ಹಣತೆ. ಗಾಂಧೀ ಅವರ ಜೀವನ ಶ್ರದ್ಧೆ, ಬಾಳಿನ ಗುರಿ ಸತ್ಯ ಸಂಸ್ಕಾರ, ನಮ್ಮೊಡನೆ ಬದುಕಿ ಬಾಳಿದ ಸತ್ಯಸಂಗತಿಯ ಸತ್ಯವಂತ ಗಾಂಧೀ, ಈ ಪೀಳಿಗೆಗೆ ಇವರೆಷ್ಟು ಸಾಕ್ಷಿ ಎಂದು ತಿಳಿಯಲು ಅವರು ಕನಸು ಕಂಡ ಆದರ್ಶ ಗ್ರಾಮಗಳ ಬದುಕು ಬವಣೆಯನ್ನು ನಾವು ತೆರೆದು ನೋಡಬೇಕಾಗಿದೆ.


‘ಮತ್ತೆ ಗ್ರಾಮಕ್ಕೆ ಮರಳಿ’ ಎಂಬ ಗಾಂಧೀಯವರ ಮಾತು ಅಕ್ಷರಶಃ ಸತ್ಯ. ಅದು ಗಾಂಧೀ ಸತ್ಯ. ಇಡೀ ಭಾರತ ದೇಶ ನಿಜವಾದ ಸ್ವಾತಂತ್ರ್ಯ ಗಳಿಸಿಕೊಂಡು ಆ ಮೂಲಕ ಜಗತ್ತು ಸ್ವತಂತ್ರವಾಗಬೇಕಾದರೆ ಇಂದಲ್ಲ ನಾಳೆ ಜನ ಹಳ್ಳಿಗಳಲ್ಲೇ ವಾಸಮಾಡಬೇಕಾದುದು ಅನಿವಾರ್ಯ ನಗರಗಳಲ್ಲಲ್ಲ. ಕುಟೀರಗಳಲ್ಲಿ ಜೀವಿಸಬೇಕು. ಅರಮನೆಗಳಲ್ಲಲ್ಲ ಎಂಬ ನಿಷ್ಠುರ ಸತ್ಯವನ್ನು ಮನಗಾಣಬೇಕು.

ನನಗಂತು ಇದು ನಿಚ್ಚಳವಾಗಿದೆ. ನಗರಗಳ ಆರಮನೆಗಳಲ್ಲಿ ಎಂದೂ ಕೋಟ್ಯಂತರ ಜನ ಪರಸ್ಪರ ಶಾಂತಿಯಿಂದ ಬಾಳಿ ಬದುಕುವುದು ಅಸಾಧ್ಯ. ಹಿಂಸೆ ಮತ್ತು ಅಸತ್ಯಗಳನ್ನು ಆಶ್ರಯಿಸಿಯೇ ಜೀವನ ಸಾಗಿಸಬೇಕಾದೀತು. ಅಹಿಂಸೆ ಮತ್ತು ಸತ್ಯವನ್ನು ನಿರಾಕರಿಸಿದರೆ ಮಾನವಕುಲ ನಾಶವಾಗುವುದೆಂಬುವುದು ನನ್ನ ಮತ. ಇಂಥ ಅಹಿಂಸಾತ್ಮಕ ಸತ್ಯ ನಿಷ್ಠ ಬಾಳು ಸರಳವಾದ ಗ್ರಾಮಜೀವನದ ಮೂಲಕವೇ ಸಿದ್ಧಿಸೀತು. ಈ ಮಾತನ್ನು ಗಾಂಧೀಜಿ ಅವರು ಬಹಳ ವಿಷಾದವಾಗಿ ಅಂದೇ ಹೇಳಿದ್ದಾರೆ ಎಂಬುದಕ್ಕೆ ಈ ಮಾತುಗಳೇ ಸಾಕ್ಷಿಯಾಗಿವೆ.

ಪ್ರತಿಯೊಂದು ಗ್ರಾಮವು ಒಂದೊಂದು ಗಣರಾಜ್ಯ. ಅವುಗಳು ಸ್ವಾವಲಂಬಿ ಗ್ರಾಮುವಾಗಿರಬೇಕು. ಎಲ್ಲ ವಸ್ತುಗಳನ್ನು ಆ ಗ್ರಾಮದ ಜನರೇ ತಯಾರಿಸಿಕೊಳ್ಳಬೇಕು. ಅವರೇ ಹಂಚುಂಡು ಬಾಳಬೇಕು ಎಂಬುವುದೇ ಗಾಂಧೀ ಅವರ ಆದರ್ಶ ಗ್ರಾಮಗಳ ಕನಸಾಗಿತ್ತು. ನಮ್ಮ ಗ್ರಾಮಗಳಲ್ಲಿ ಮಾನವ ಜೀವಿಗಳು ಇರುತ್ತಾರೆ. ಅವರೆಂದೂ ಕೊಳಗೇರಿಯ ಅಂಧಕಾರದಲ್ಲಿ ತೊಳಲುವ ಪ್ರಾಣಿಗಳಂತಿರುವುದಿಲ್ಲ. ಸ್ವತಂತ್ರರಾಗಿ ಸ್ವಾಭಿಮಾನಿಯಾಗಿ ದುಡಿದು ಬಾಳುವ ಜನ ಯಾರೂ ನಿರುದ್ಯೋಗಿಗಳಲ್ಲದೆ ಶ್ರಮಜೀವಿಗಳಾಗಿ ಬದುಕುತ್ತಾರೆ.


'ಹಳ್ಳಿ ನಾಶವಾದರೆ ಭಾರತವೂ ನಾಶವಾಗುತ್ತದೆ.' ಹಳ್ಳಿಗಳ ಕರಕುಶಲ ಕೆಲಸಗಳು ನಾಶವಾದರೆ ಗ್ರಾಮೋದ್ಯೋಗ ನಾಶವಾದಂತೆ. ಆಗ ಅದೆಂದೂ ಗ್ರಾಮೀಣ ಆದರ್ಶ ಭಾರತ ಎನಿಸಿಕೊಳ್ಳಲಾರದು.

ಹಳ್ಳಿಗಳಲ್ಲಿ ಸಿಗುವ ಸಾಮಗ್ರಿಗಳನ್ನು ಬಳಸಿಕೊಂಡು ಗಾಳಿ ಬೆಳಕು ಧಾರಾಳವಾಗಿರುವಂತೆ ಕಟ್ಟಲಾದ ಕುಟೀರಗಳು, ಒಂದೊಂದು ಮನೆಗೂ ಹಿತ್ತಲು, ದನದ ಕೊಟ್ಟಿಗೆ, ಸೊಪ್ಪು ತರಕಾರಿಗೆ ಸಾಕಷ್ಟು ಜಾಗ ಇರುತ್ತದೆ. ಎಲ್ಲರಿಗೂ ಲಭ್ಯವಾದ ಕೆರೆ, ಬಾವಿಗಳು ಅಗಾಧವಾಗಿವೆ. ದನಕರುಗಳಿಗೆ ಗೋಮಾಳವಿದೆ. ಹಳ್ಳಿಗಳಲ್ಲೇ ನ್ಯಾಯ ಧರ್ಮಗಳ ಅರಳೀಮರ ನ್ಯಾಯಾಸ್ಥಾನವಾಗಿದೆ




ಅಗತ್ಯವಾದ ದವಸ ಧಾನ್ಯಗಳನ್ನು ನಮ್ಮ ರೈತರು ಬೆಳೆದು ಹಂಚುತ್ತಾರೆ. ಬಟ್ಟೆ ಉತ್ಪಾದನೆ, ಮಡಕೆ, ಮರಗೆಲಸ, ಗುಡಿ, ಕೈಗಾರಿಕೆಗಳು ಬಹಳಷ್ಟು ಇವೆ. ಅವೆಲ್ಲವೂ ಮತ್ತೆ ಪುನರುಜ್ಜೀವನವಾಗುವುದಕ್ಕೆ ನಾವೆಷ್ಟು ಶ್ರಮಪಡುತ್ತಿದ್ದೇವೆ, ಮತ್ತೆ ಹಳ್ಳಿ ಕಡೆ ನೋಡುತ್ತಿದ್ದೇವೆ ಎಂಬ ಆದರ್ಶ ಕನಸಿನ ಗ್ರಾಮ ಚಿಂತನೆ ಬಹಳಷ್ಟು ಮಾಡಬೇಕಾಗಿದೆ ಎಂದ ಗಾಂಧಿ ಅವರ ಅಂತರಾತ್ಮದ ಮಾತುಗಳನ್ನು ತಮ್ಮ ಮುಂದೆ ತೆರೆದಿಡುತ್ತಿದ್ದೇನೆ.

ಅಸಂಖ್ಯ ಹಳ್ಳಿಗಳುಳ್ಳ ಭಾರತ ತಮ್ಮ ತಮ್ಮ ಹಳ್ಳಿಯಲ್ಲೇ ಎಲ್ಲವನ್ನು ಬೆಳೆದುಕೊಂಡು ಹಂಚಿಕೊಂಡು ಸೌಹಾರ್ದ ಬದುಕು ನಡೆಸುವುದು ಅತಿ ಸೂಕ್ತವಾದದ್ದು ಮತ್ತು ಅದೇ ನೆಮ್ಮದಿಯ ಬದುಕು ಎಂಬ ಮಾತನ್ನು ಹೇಳಿ ಹೋದ ಗಾಂಧಿ ಇವತ್ತಿಗೂ ಎಷ್ಟು ವಾಸ್ತವ. ಊರಿಗೆ ಯಾವ ಬಸ್ಸುಗಳೂ ಬರಬಾರದು ಹೋಗಬಾರದು. ನಗರಕ್ಕೆ ಹಳ್ಳಿಯ ಜನ ಹೋದರೆ ನಗರ ಜೀವನದ ಆಮಿಷಕ್ಕೆ ಅನಿವಾರ್ಯವಾಗಿ ಬಲಿಯಾಗುತ್ತಾರೆ. ಅದೇ ನಗರದ ಜನ ಹಳ್ಳಿಗೆ ಬಂದರೆ ನಿಜವಾದ ನಿರ್ಮಲವಾದ ಬದುಕು ಬದಲಾಗುತ್ತ ಹಳ್ಳಿಯು ಕೂಡ ನಗರವಾಗುವ ಸಾಧ್ಯತೆ ಇದೆ ಎಂಬ ಮಾತುಗಳು ಸತ್ಯವಾಗುತ್ತಿವೆ.



ಒಂದು ದೇಶ ಅಥವ ನಾಡು ತನ್ನ ಭಾಷೆ, ಸಂಸ್ಕೃತಿ ಮತ್ತು ಕುಲಕಸುಬುಗಳನ್ನು ಕಳೆದುಕೊಂಡರೆ ಆ ದೇಶ, ಆ ನಾಡು ನಾಶವಾದಂತೆ ಎಂಬ ನಾಣ್ಣುಡಿಯು ಇವತ್ತಿನ ಕಾಲಕ್ಕೆ ಬಹಳ ಹತ್ತಿರವಾಗುತ್ತಿದೆ. ಆ ಗ್ರಾಮ ತನ್ನ ಸ್ವರಾಜ್ಯದಲ್ಲಿ ಬದುಕಿಬಾಳುವುದು, ಹಳ್ಳಿ ಹಳ್ಳಿಯ ಸಂಸ್ಕೃತಿ ಬೆಳೆಯುವಂತೆ ಮಾಡುವುದು ನಮ್ಮ ಧರ್ಮ. ಆಗ ಮಾತ್ರ ಗ್ರಾಮ ಆದರ್ಶವಾಗುತ್ತದೆ. ದೇಶ, ದೇಶೀಯ ಸಂಸ್ಕೃತಿಯನ್ನು ಎತ್ತರಕ್ಕೇರಿಸುತ್ತದೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ೨೦೧೦ ಜನವರಿಯಿಂದ ಜುಲೈ ಅಂತ್ಯದವರೆಗೆ ಆಯೋಜಿಸಿದ್ದ ಕಾರ್ಯಕ್ರಮಗಳ ವರದಿ



ದಿನಾಂಕ ೧೨-೧-೨೦೧೦ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನ ಸಂಯುಕ್ತವಾಗಿ ಸ್ವಾಮಿ ವಿವೇಕಾನಂದರ ೧೪೭ನೇ ಜನ್ಮದಿನಾಚರಣೆಯನ್ನು ಗಾಂಧೀ ಭವನದಲ್ಲಿ ಆಯೋಜಿಸಲಾಗಿತ್ತು. ಡಾ. ಪ್ರಭುಶಂಕರ್ ಅವರು, ನಿವೃತ್ತ ನಿರ್ದೇಶಕರು, ಪ್ರಸಾರಾಂಗ, ಮೈಸೂರು ಇವರು ರಾಷ್ಟ್ರಪ್ರಗತಿಯಲ್ಲಿ ಯುವಶಕ್ತಿಯ ಪಾತ್ರ ಕುರಿತು ಮಾತನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ತುಮಕೂರು ಇದರ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದ ಸರಸ್ವತಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ಮತ್ತು ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೂಡೆ ಪಿ. ಕೃಷ್ಣ ಅವರು ಉಪಸ್ಥಿತರಿದ್ದರು. ನಿಧಿಯ ಕಾರ್ಯದರ್ಶಿ ಪ್ರೊ. ಹೆಚ್. ಆರ್. ದಾಸೇಗೌಡ ಅವರು ಪ್ರಾಸ್ತಾವಿಕ ಮಾತನ್ನಾಡಿದರು. ನಿಧಿಯ ಸಹ ಕಾರ್ಯದರ್ಶಿ ಡಿ. ಕೆ. ಕೋದಂಡರಾಮು ವಂದಿಸಿದರು. ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಸಿದ್ಧಾರ್ಥ ಶರ್ಮ ಉಪಸ್ಥಿತರಿದ್ದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರಾಪಾರ್ಕ್‌ಪೂರ್ವ, ಬೆಂಗಳೂರು ದಿನಾಂಕ ೨೩-೧-೨೦೧೦ ಬೆಳಗ್ಗೆ ೧೦-೦೦ ಗಂಟೆಗೆ ಸಮ್ಮಾಳ್ವರ್ ದತ್ತಿ ಕಾರ್ಯಕ್ರಮದ ಅಂಗವಾಗಿ ರಾಮನಗರ ತಾಲ್ಲೂಕಿನ ವಿಧ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣ ಸಮಾರಂಭವನ್ನು ಶಾಂತಿನಿಕೇತನ ಪದವಿ ಪೂರ್ವ ಕಾಲೇಜು, ರಾಮನಗರ ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಬಹುಮಾನ ವಿತರಣೆಯನ್ನು ಶ್ರೀ ಆರ್. ಕುಮಾರಸ್ವಾಮಿ ಅವರು, ಸಂಸ್ಥಾಪಕ ಕಾರ್ಯದರ್ಶಿಗಳು, ಶಾಂತಿನಿಕೇತನ ವಿದ್ಯಾಸಂಸ್ಥೆಗಳು, ರಾಮನಗರ ಇವರು ನಡೆಸಿಕೊಟ್ಟರು.

ಸನ್ಮಾನ್ಯ ಡಾ. ಎಸ್ ಎಲ್ ತಿಮ್ಮಯ್ಯನವರು, ಹಿರಿಯ ಗಾಂಧೀವಾದಿಗಳು ಹಾಗೂ ಸರ್ವೋದಯ ನಾಯಕರು "ಮಹಾತ್ಮ ಗಾಂಧೀಜಿಯವರ ಸರ್ವೋದಯ ಸಮಾಜ ನಿರ್ಮಾಣದ" ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಸನ್ಮಾನ್ಯ ಪ್ರೊ ಹೆಚ್. ಆರ್. ದಾಸೇಗೌಡ ಅವರು ಕಾರ್ಯದರ್ಶಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಿಧಿಯ ಸಹ ಕಾರ್ಯದರ್ಶಿ, ಡಿ. ಕೆ. ಕೋದಂಡರಾಮು ವಂದಿಸಿದರು. ಕೆ. ಪಿ. ಶಿವಪ್ಪ ಆಡಳಿತಾಧಿಕಾರಿಗಳು ಶಾಂತಿನಿಕೇತನ ಸಮೂಹ ವಿದ್ಯಾಸಂಸ್ಥೆ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಧ್ಯಾಪಕರ ವರ್ಗ ಉಪಸ್ಥಿತಿ ಹೊಂದಿದ್ದರು.




ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನ ಸಂಯುಕ್ತವಾಗಿ ಭಾರತದ ಗಣರಾಜ್ಯೋತ್ಸವದ ಆಚರಣೆಯನ್ನು ದಿನಾಂಕ ೨೬-೧-೨೦೧೦ ಬೆಳಗ್ಗೆ ೯-೩೦ಕ್ಕೆ ಆಯೋಜಿಸಿತ್ತು. ಮೊದಲಿಗೆ ರಾಷ್ಟ್ರ ಧ್ವಜಾರೋಹಣವನ್ನು ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ನೆರವೇರಿಸಿದರು. ಈ ಕಾರ್ಯಕ್ರಮದ ಅಂಗವಾಗಿ ೩ ದಿನಗಳ ಗಾಂಧೀ ಫೋಟೋ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಲಿಟಲ್ ಫ್ಲವರ್ ಶಾಲೆಯ ಮಕ್ಕಳಿಂದ ಗಾಂಧೀಜಿಯವರ ವಿವಿಧ ಭಂಗಿಗಳ ಚಿತ್ರ ರಚನೆಯ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಈ ಎರಡು ಪ್ರದರ್ಶನವನ್ನು ಗಾಂಧೀ ನಾಷನಲ್ ಮ್ಯೂಜಿಯಂ ಅಧ್ಯಕ್ಷರಾದ ಡಾ. ವರ್ಷಾದಾಸ ಅವರು ಉದ್ಘಾಟಿಸಿದರು.

ಗಾಂಧಿಯಾನ

ಭಾರತದಲ್ಲಿ ಗಣರಾಜ್ಯ ಫಲಪ್ರದವಾಗಿದೆಯೇ ಎಂಬ ವಿಷಯದ ಬಗ್ಗೆ ಮುಕ್ತ ಚರ್ಚೆಯನ್ನು ಆಯೋಜಿಸಲಾಗಿತ್ತು. ಈ ಚರ್ಚೆಯಲ್ಲಿ ಮಾಜಿ ಕೇಂದ್ರ ಸಚಿವರಾದ ಶ್ರೀ ಧನಂಜಯ ಕುಮಾರ್ ಅವರು ಮತ್ತು ವಿಧಾನ ಪರಿಷತ್ ಮಾಜಿ ಪ್ರತಿಪಕ್ಷದ ನಾಯಕರು ಆದ ಶ್ರೀ ವಿ. ಎಸ್. ಉಗ್ರಪ್ಪನವರು ಮತ್ತು ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ. ಪಿ. ನಾಡಗೌಡ ಅವರು ಚರ್ಚೆಯಲ್ಲಿ ಭಾಗವಹಿಸಿದ್ದರು. ನಿಧಿ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ಅಧ್ಯಕ್ಷತೆ ವಹಿಸಿದ್ದರು. ನಿಧಿಯ ಕಾರ್ಯದರ್ಶಿ ಪ್ರೊ. ಹೆಚ್. ಆರ್. ದಾಸೇಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರೂಪಿಸಿದರು. ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೂಡೆ ಪಿ. ಕೃಷ್ಣ ಅವರು ಉಪಸ್ಥಿತರಿದ್ದರು. ಸಹ ಕಾರ್ಯದರ್ಶಿ ಕೋದಂಡರಾಮು ವಂದಿಸಿದರು. ಸುಮಾರು ೧೫೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ನಾಗರಿಕರು ಈ ಪ್ರದರ್ಶನವನ್ನು ವೀಕ್ಷಿಸಿದರು.

ಗಾಂಧೀ ಶಾಂತಿ ಪ್ರತಿಷ್ಠಾನ ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದಲ್ಲಿ ಭಾರತ ಗಣರಾಜ್ಯೋತ್ಸವದ ಅಂಗವಾಗಿ ಅದೇ ದಿನ ಸಂಜೆ 'ನನ್ನ ಕನಸಿನ ಭಾರತ' ಬಗ್ಗೆ ಒಂದು ಚಿಂತನ ಮಂಥನ ಹಾಗೂ ಡಾ. ಹೊ. ಶ್ರೀನಿವಾಸಯ್ಯನವರ 'ಮಕ್ಕಳೇ ನಿಮಗೆ ಆರೋಗ್ಯ ಬೇಕೆ' ಎಂಬ ಆಂಗ್ಲ ಕೃತಿಯ ಲೋಕಾರ್ಪಣೆ ಸಮಾರಂಭವನ್ನು ಆಯೋಜಿಸಲಾಗಿತ್ತು. ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೂಡೆ ಪಿ. ಕೃಷ್ಣ ಅವರು ಪುಸ್ತಕ ಬಿಡುಗಡೆ ಮಾಡಿದರು. ಹಿರಿಯ ಸ್ವಾತಂತ್ರ ಹೋರಾಟಗಾರ ಡಾ. ಹೆಚ್. ಎಸ್. ದೊರೆಸ್ವಾಮಿ ಹಾಗೂ ಡಾ. ಹೊ. ಶ್ರೀನಿವಾಸಯ್ಯ ಹಾಗೂ ನಿಧಿಯ ಸದಸ್ಯರಾದ ಶ್ರೀ ಲ. ನರಸಿಂಹಯ್ಯ ಅವರು ವಿದ್ಯಾರ್ಥಿಗಳೊಡನೆ ಸಂವಾದಿಸಿದರು. ಶ್ರೀಮತಿ ಕೆ. ಪಿ. ಅನುಪಮ ಅವರು ಕಾರ್ಯಕ್ರಮ ನಿರೂಪಿಸಿದರು. ನಿಧಿಯ ಕಾರ್ಯದರ್ಶಿ ಪ್ರೊ. ಹೆಚ್. ಆರ್. ದಾಸೇಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಸಿದ್ಧಾರ್ಥ ಶರ್ಮ ವಂದಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧೀ ಶಾಂತಿ ಪ್ರತಿಷ್ಠಾನ ದಿನಾಂಕ ೩೦-೧-೨೦೧೦ರಂದು



ಸರ್ವೋದಯ ದಿನಾಚರಣೆಯನ್ನು ಹಮ್ಮಿಕೊಂಡಿದ್ದವು. ಈ ಕಾರ್ಯಕ್ರಮದ ಅಂಗವಾಗಿ ಆದಿಚುಂಚನಗಿರಿ ಮಠ ಹಾಗೂ ಎಂ. ಎಚ್. ಕೌಜಲಗಿ ದತ್ತಿಯ ವತಿಯಿಂದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿತ್ತು. ಬೆಳಗ್ಗೆ ೯-೩೦ಕ್ಕೆ ಶಾಂತಿ ಯಾತ್ರೆಯನ್ನು ಪ್ರತಿವರ್ಷದಂತೆ ಆಯೋಜಿಸಲಾಗಿ ಸೇವಾದಳದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಶೇಷಾದ್ರಿಪುರಂ ಶಿಕ್ಷಣಕ್ಕೆ ದತ್ತಿಯ ವಿದ್ಯಾರ್ಥಿ ವಿಧ್ಯಾರ್ಥಿನಿಯರು. ಬಿ. ಇ. ಎಸ್. ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಗಾಂಧೀವಾದಿಗಳು ಭಾಗವಹಿಸಿದ್ದರು. ಬಿ. ಇ. ಎಸ್. ಶಾಲೆಯ ಮಕ್ಕಳು ಗಾಂಧೀಜಿಯವರ ಪ್ರೀತಿಯ ಭಜನೆ ಮತ್ತು ಪ್ರಾರ್ಥನೆಗಳನ್ನು ಹಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ನಿರ್ದೇಶಕರು ದೂರದರ್ಶನ ಕೇಂದ್ರ, ಶ್ರೀಯುತ ಮಹೇಶ್ ಜೋಶಿ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ಆಗಮಿಸಿದ್ದರು.




ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೂಡೆ ಪಿ. ಕೃಷ್ಣ ಅವರು ಸಭಿಕರಿಗೆ ಪ್ರತಿಜ್ಞೆ ಬೋಧಿಸಿದರು. ನಿಧಿಯ ಕಾರ್ಯದರ್ಶಿ ಪ್ರೊ. ಹೆಚ್. ಆರ್. ದಾಸೇಗೌಡ ಪ್ರಾಸ್ತಾವಿಕ ಮಾತನ್ನಾಡಿದರು. ಗಾ. ಶಾ. ಪ್ರ. ಕಾರ್ಯದರ್ಶಿ ಸಿದ್ದಾರ್ಥ ಶರ್ಮ ಉಪಸ್ಥಿತರಿದ್ದರು. ನಿಧಿಯ ಸಹಕಾರ್ಯದರ್ಶಿ ಡಿ. ಕೆ. ಕೋದಂಡರಾಮು ವಂದಿಸಿದರು.

ದಿನಾಂಕ ೫-೨-೨೦೧೦ ರಂದು ಶುಕ್ರವಾರ ಮಧ್ಯಾಹ್ನ ಗಾಂಧೀ ವಿಚಾರ ಪ್ರಚಾರ ಕಾರ್ಯಕ್ರಮವನ್ನು ಪಾವಗಡದ ಎಸ್. ಎಸ್. ಕೆ. ಬಯಲು ರಂಗ ಮಂದಿರದಲ್ಲಿ ಆಯೋಜಿಸಲಾಗಿತ್ತು. ಗಾಂಧೀಜಿಯವರ 'ನನ್ನ ಕನಸಿನ ರಾಮರಾಜ್ಯ' ನಿರ್ಮಿಸುವಲ್ಲಿ, ಎಸ್. ದೊರೆಸ್ವಾಮಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮೇಲ್ಕಂಡ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಂ. ಎನ್. ಮಂಜುನಾಥ್. ತಹಶೀಲ್ದಾರ್. ಪಾವಗಡ ಅವರು ನೆರವೇರಿಸಿದರು. ಶ್ರೀ ಡಿ. ಕೆ. ಕೋದಂಡರಾಮು. ಸಹಕಾರ್ಯದರ್ಶಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ತಿಮ್ಮರಾಜು. ಕ್ಷೇತ್ರ ಶಿಕ್ಷಣಾಧಿಕಾರಿಗಳು. ಪಾವಗಡ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ನಿಧಿಯ ಸದಸ್ಯರಾದ ಲ. ನರಸಿಂಹಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳಿಗೆ ಗಾಂಧೀ ವಿಚಾರಧಾರೆಯ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ದವನಂ ಅಮರನಾಥ ಅವರು ಉಪಸ್ಥಿತರಿದ್ದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ರಾಷ್ಟ್ರೀಯ ವಿದ್ಯಾಪೀಠ ವಿದ್ಯಾಸಂಸ್ಥೆ ವೈ. ಎನ್. ಹೊಸಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಗಾಂಧೀ ವಿಚಾರ ಪ್ರಚಾರ ಕಾರ್ಯಕ್ರಮವನ್ನು ದಿನಾಂಕ ೬-೨-೨೦೧೦ರ ಶನಿವಾರ ಬೆಳಗ್ಗೆ ೮-೦೦ ಗಂಟೆಗೆ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಟಿ. ವಿ. ಜಗನ್ನಾಥ್ ಅವರು ವಹಿಸಿದ್ದರು. ಗಾಂಧೀಜಿಯವರ 'ನನ್ನ ಕನಸಿನ ರಾಮರಾಜ್ಯ' ನಿರ್ಮಿಸುವಲ್ಲಿ ಯುವಜನತೆಯ ಪಾತ್ರ, ಎಂಬ ವಿಷಯದ ಬಗ್ಗೆ ಉಪನ್ಯಾಸ ಆಯೋಜಿಸಲಾಗಿತ್ತು. ಡಾ. ಹೆಚ್. ಎಸ್. ದೊರೆಸ್ವಾಮಿ, ಹಿರಿಯ ಸ್ವಾತಂತ್ರ ಹೋರಾಟಗಾರರು ಮೇಲ್ಕಂಡ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ದವನಂ ಎ. ಅಮರನಾಥ, ಗಾಂಧೀ ಶಾಂತಿ ಪ್ರತಿಷ್ಠಾನದ ಸದಸ್ಯರು ಶ್ರೀ ಇ. ವಿ. ಶ್ರೀಧರ್, ಕಾರ್ಯದರ್ಶಿಗಳು, ವಿದ್ಯಾಪೀಠ ಹಾಗೂ ಶ್ರೀ ಸಣ್ಣನಾಗಪ್ಪ ಪ್ರಾಂಶುಪಾಲರು, ರಾಷ್ಟ್ರೀಯ ವಿದ್ಯಾಪೀಠ ಉಪಸ್ಥಿತರಿದ್ದರು. ನಿಧಿಯ ಸಹಕಾರ್ಯದರ್ಶಿ ಡಿ. ಕೆ. ಕೋದಂಡರಾಮು ಹಾಗೂ ನಿಧಿಯ ಸದಸ್ಯರಾದ ಶ್ರೀ ಲ. ನರಸಿಂಹಯ್ಯ ಉಪಸ್ಥಿತರಿದ್ದರು. ವಿದ್ಯಾರ್ಥಿ ಹಾಗೂ ಅಧ್ಯಾಪಕ ವೃಂದ ಉಪಸ್ಥಿತರಿದ್ದರು.

ಜಮನಾಲಾಲ ಬಜಾಜ್ ಸೇವಾ ಟ್ರಸ್ಟ್ ಹಾಗೂ ವಿಶ್ವನೀಡಂ ಟ್ರಸ್ಟ್, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧೀ ಶಾಂತಿ ಪ್ರತಿಷ್ಠಾನ, ಸುಮಂಗಲಿ ಸೇವಾಶ್ರಮ ಸಂಯುಕ್ತವಾಗಿ ಮಹಿಳೆಯರಿಗಾಗಿ 'ಗಾಂಧೀಜಿಯವರ ದೃಷ್ಟಿಕೋನದಲ್ಲಿ ಮಹಿಳಾ ಸಬಲೀಕರಣ' ಎಂಬ ಎರಡು ದಿನಗಳ ಕಾರ್ಯಾಗಾರವನ್ನು ದಿನಾಂಕ ೧೯-೨-೨೦೧೦ ಮತ್ತು ೨೦-೨-೨೦೧೦ ರಂದು ಗಾಂಧೀ ಭವನದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಯುತ ಗೌತಮ ಬಜಾಜ್ ಅವರು ನೆರವೇರಿಸಿದರು. ಅಧ್ಯಕ್ಷತೆಯನ್ನು ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸವಿತಾ ಭಟ್ ಅವರಿದ್ದರು. ಶ್ರೀಮತಿ ಎಸ್. ಜಿ. ಸುಶೀಲಮ್ಮನವರು ಹಾಗೂ ಡಾ. ವೂಡೆ ಪಿ. ಕೃಷ್ಣ ಅವರು ಉಪಸ್ಥಿತರಿದ್ದರು. ಮಧ್ಯಾಹ್ನದ ಸಭೆಯಲ್ಲಿ ಶ್ರೀಮತಿ ಮೀನಾ ದೇಶಪಾಂಡೆಯವರು ಗಾಂಧಿ




ದೃಷ್ಟಿಕೋನದಲ್ಲಿ ಮಹಿಳಾ 'ಸಬಲೀಕರಣ' ಎಂಬ ವಿಷಯವಾಗಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸವಿತಾ ಭಟ್ ವಹಿಸಿದ್ದರು. ಎರಡನೇ ದಿನದ ಕಾರ್ಯಕ್ರಮ ಅಂತರ ರಾಷ್ಟ್ರೀಯ ಸರ್ವೋದಯ ಕೇಂದ್ರ ವಿನೋಬಾ ಧಾಮ, ಮಾಗಡಿ ರಸ್ತೆ ಇಲ್ಲಿ ಜರುಗಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಎಸ್. ಜಿ. ಸುಶೀಲಮ್ಮನವರು 'ಎನ್. ಜಿ. ಒ' ಗಳು ಎದುರಿಸುತ್ತಿರುವ ಸಮಸ್ಯೆಗಳು. ಈ ಬಗ್ಗೆ ಉಪನ್ಯಾಸ ನೀಡಿದರು. ಕಿನೇ ಸಮಾವೇಶದ ಅಧ್ಯಕ್ಷತೆಯನ್ನು ಶ್ರೀ ಯು. ವಿ. ಎಸ್. ಕೃಷ್ಣ ಅಯ್ಯರ್ ಅವರು ವಹಿಸಿದ್ದರು. 'ಪ್ರತಿನಿಧಿ ಸಂಘಟನೆಗಳ ಉದ್ದೇಶಗಳು' ಎಂಬ ವಿಷಯದ ಬಗ್ಗೆ ಶ್ರೀಮತಿ ಅನುಪಮಾರವರು ಸಂವಾಹಕರಾಗಿ ಕಾರ್ಯನಿರ್ವಹಿಸಿದರು. ಸಂಜೆ ಸಮಾರೋಪ ಸಮಾರಂಭ ಜರುಗಿತು.



ಶ್ರೀಯುತ ಗೌತಮ ಬಜಾಜ್ ಅವರು ಆಗಮಿಸಿದ್ದರು. ಸರ್ವೋದಯ ಇಂಟರ್ ನ್ಯಾಷನಲ್ ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಪಿ. ಎ. ನಜರತ್ ಹಾಗೂ ಶ್ರೀಯುತ ಡಿ. ಆರ್. ಪಾಟೀಲ್ ಅವರು ನಿಧಿ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು, ಶ್ರೀಮತಿ ಸವಿತಾ ಭಟ್ ಅವರು, ಶ್ರೀಮತಿ ಎಸ್. ಜಿ. ಸುಶೀಲಮ್ಮನವರು, ಶ್ರೀ ನೀರಜ ಬಜಾಜ್ ಅವರು, ಡಾ. ವೂಡೆ ಪಿ. ಕೃಷ್ಣ ಅವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಪ್ರಾಸ್ತಾವಿಕ ಮಾತುಗಳನ್ನು ಪ್ರೊ. ಹೆಚ್. ಆರ್. ದಾಸೇಗೌಡ ಅವರು, ಕಾರ್ಯದರ್ಶಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅವರು ಮಾಡಿದರು. ಗಾ. ಶಾ. ಪ್ರ. ದ. ಕಾರ್ಯದರ್ಶಿ ಶ್ರೀ ಸಿದ್ಧಾರ್ಥ ಶರ್ಮ ವಂದಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧, ಜೆ. ಸಿ. ಎಸ್. ಐ. ಟಿ. ಐ. ಕಾಲೇಜು, ನೆಲಮಂಗಲ ಇವುಗಳ ಸಂಯುಕ್ತ ಆಶ್ರಯದಲ್ಲಿ ನಮ್ಮಾಳ್ವರ್ ದತ್ತಿ ಕಾರ್ಯಕ್ರಮದ ಅಂಗವಾಗಿ ಗಾಂಧೀ ವಿಚಾರ ಪ್ರಚಾರ ಕಾರ್ಯಕ್ರಮವನ್ನು ದಿನಾಂಕ ೨೩-೨-೨೦೧೦ ಮಧ್ಯಾಹ್ನ ೧೨-೦೦ ಗಂಟೆಗೆ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಶ್ರೀ [illegible] ಅವರು, ಪ್ರಾಂಶುಪಾಲರು, ಜೆ. ಸಿ. ಎಸ್. ಐ. ಟಿ.

ಐ. ಕಾಲೇಜು ನೆಲಮಂಗಲ, ಇವರು ವಹಿಸಿದ್ದರು. ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ಆರೋಗ್ಯ ಮತ್ತು ಗಾಂಧೀ ಬಗ್ಗೆ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಲ. ನರಸಿಂಹಯ್ಯನವರು ಆಗಮಿಸಿದ್ದರು. ಪ್ರೊ. ಹೆಚ್. ಆರ್. ದಾಸೇಗೌಡ ಅವರು, ಕಾರ್ಯದರ್ಶಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಶ್ರೀಯುತ ಡಿ. ಕೆ. ಕೋದಂಡರಾಮು ವಂದಿಸಿದರು. ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿವೃಂದ ಉಪಸ್ಥಿತಿ ಹೊಂದಿತ್ತು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರಪಾರ್ಕ್ ಪೂರ್ವ, ಬೆಂಗಳೂರು ಹಾಗೂ ಮಾಗಡಿ ಕೆಂಪೇಗೌಡ ಪ್ರೌಢಶಾಲೆ, ಮಾಗಡಿ ಇವರ ಸಂಯುಕ್ತ ಆಶ್ರಯದಲ್ಲಿ ನಮ್ಮಾಳ್ವರ್ ದತ್ತಿ ಕಾರ್ಯಕ್ರಮದ ಅಂಗವಾಗಿ ಗಾಂಧೀ ವಿಚಾರ ಪ್ರಚಾರ ಕಾರ್ಯಕ್ರಮ ದಿನಾಂಕ ೨೫-೨-೨೦೧೦ ಬೆಳಗ್ಗೆ ೧೧-೩೦ ಗಂಟೆಗೆ ಮಾಗಡಿ ಕೆಂಪೇಗೌಡ ಪ್ರೌಢಶಾಲೆ ಆವರಣ, ಮಾಗಡಿಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ. ಎಲ್. ಲಕ್ಕೇಗೌಡ, ಅಧ್ಯಕ್ಷರು, ಮಾಗಡಿ ಕೆಂಪೇಗೌಡ ಪ್ರೌಢಶಾಲೆ ಇವರು ವಹಿಸಿದ್ದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರು 'ಆರೋಗ್ಯ ಮತ್ತು ಗಾಂಧೀ' ಎಂಬ ವಿಷಯದ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಲ. ನರಸಿಂಹಯ್ಯನವರು, ಕಾರ್ಯದರ್ಶಿಗಳು, ಕರ್ನಾಟಕ ಸರ್ವೋದಯ ಮಂಡಲ ಇವರು ಆಗಮಿಸಿ ಗಾಂಧೀ ವಿಚಾರ ಧಾರೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಪ್ರೊ. ಹೆಚ್. ಆರ್. ದಾಸೇಗೌಡ ಅವರು, ಕಾರ್ಯದರ್ಶಿ, ಕರ್ನಾಟಕ ಗಾಂಧೀ ಸ್ಮಾತಕ ನಿಧಿ ಇವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಿ. ಕೆ. ಕೋದಂಡರಾಮು, ಸಹ ಕಾರ್ಯದರ್ಶಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ವಂದಿಸಿದರು. ಶ್ರೀ ರೇವಣ್ಣ, ಉಪಾಧ್ಯಕ್ಷರು, ಮಾಗಡಿ ಕೆಂಪೇಗೌಡ ಪ್ರೌಢಶಾಲೆ ಹಾಗೂ ಅಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿ ವೃಂದ ಉಪಸ್ಥಿತಿ ಹೊಂದಿದ್ದರು.

ಗಾಂಧೀ ಶಾಂತಿ ಪ್ರತಿಷ್ಠಾನ ಹಾಗೂ ಗಾಂಧೀ ಸ್ಮಾರಕ ನಿಧಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ

ಮಕ್ಕಳಿಗಾಗಿ ಹಾಗೂ ಮಹಿಳೆಯರಿಗಾಗಿ ಕಾರ್ಯಕ್ರಮವನ್ನು ದಿನಾಂಕ ೧೧-೩-೨೦೧೦ ರಂದು ಸಂಜೆ ೩-೩೦ಕ್ಕೆ ಗಾಂಧೀ ಭವನದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ ಹಾಗೂ ವಿವಿಧ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿತ್ತು. ಮಹಿಳೆಯರು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಂತೆ ತಿಳುವಳಿಕೆ ಪಡೆದುಕೊಳ್ಳಲು ಪ್ರಖ್ಯಾತ ಸ್ತ್ರೀರೋಗ ತಜ್ಞೆಯಾದ ಡಾ. ಕಾಮಿನಿ ರಾವ್ ಅವರಿಂದ ಗರ್ಭಕೋರಳಿನ ಕ್ಯಾನ್ಸರ್ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯನವರು ವಹಿಸಿದ್ದರು. ನಿಧಿಯ ಕಾರ್ಯದರ್ಶಿ ಪ್ರೊ ಹೆಚ್. ಆರ್. ದಾಸೇಗೌಡ ಅವರು ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು. ಶಿಕ್ಷಕರಿಗೆ ಹಾಗೂ ಪೋಷಕರಿಗಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಕ್ಕಳಲ್ಲಿ ದೇಶಭಕ್ತಿ ಹಾಗೂ ನೈತಿಕ ಮೌಲ್ಯ ವೃದ್ಧಿಸುವಲ್ಲಿ ಶಿಕ್ಷಕರ ಹಾಗೂ ಪೋಷಕರ ಪಾತ್ರ ಇದರ ಬಗ್ಗೆ ಶ್ರೀಮತಿ ಗಾಯಿತ್ರಿ ತ್ರಾಸಿ ಉಪನ್ಯಾಸ ನೀಡಿದರು. ಮಕ್ಕಳಿಗೆ ಉಡುಗೊರೆ ಹಾಗೂ ಪ್ರಶಸ್ತಿ ಪತ್ರ ನೀಡಲಾಯಿತು. ಕಾರ್ಯಕ್ರಮ ನಿರೂಪಣೆಯನ್ನು ಶ್ರೀಮತಿ ಅನುಪಮ ಅವರು ಮಾಡಿದರು. ಗಾ. ಶಾ. ಪ್ರ. ದ ಶ್ರೀ ಸಿದ್ಧಾರ್ಥ ಶರ್ಮ ವಂದಿಸಿದರು.




ದಿನಾಂಕ ೨೦-೩-೨೦೧೦ ರಂದು ಸಂಜೆ ೫-೦೦ ಗಂಟೆಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧೀ ಶಾಂತಿ ಪ್ರತಿಷ್ಠಾನ ಸಂಯುಕ್ತವಾಗಿ ಉತ್ಕಲ್ ಗಾಂಧಿ ಸ್ಮಾರಕ ನಿಧಿ ಸದಸ್ಯರಾದ ಶ್ರೀ ಸಹದೇವ ಪಾತ್ರ ಅವರಿಂದ ಗಾಂಧಿ ತತ್ವಗಳ ಬಗ್ಗೆ ಹಾಗೂ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿದ್ದವು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಖಾದಿ ಕಾರ್ಯಕರ್ತರಾದ ಶ್ರೀಯುತ ಪಿ. ಜಿ. ಜೋಷಿಯವರು ವಹಿಸಿದ್ದರು. ಈ ಕಾರ್ಯಕ್ರಮದ ಬಗ್ಗೆ ನಿಧಿಯ ಕಾರ್ಯದರ್ಶಿ ಪ್ರೊ ಹೆಚ್. ಆರ್. ದಾಸೇಗೌಡ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.

ದಿನಾಂಕ ೬-೪-೨೦೧೦ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಮಾಗಡಿ ಟೌನ್, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದೊಂದಿಗೆ

ಬಿ. ಟಿ. ಆರ್. ರಾಮಣ್ಣನವರ ದತ್ತಿ ಕಾರ್ಯಕ್ರಮದಲ್ಲಿ ಗಾಂಧೀ ವಿಚಾರ-ಪ್ರಚಾರ ಸಮಾವೇಶವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಡೆಸಲಾಯಿತು. ಉದ್ಘಾಟನೆಯನ್ನು ಡಾ। ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಗಾಂಧೀ ಶಾಂತಿ ಪ್ರತಿಷ್ಠಾನ, ಇವರು ಮಾಡಿದರು. ಅಧ್ಯಕ್ಷತೆಯನ್ನು ಪ್ರೊ. ಎಚ್. ಎಸ್. ಜಗದೀಶ್, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್ ಕಶ್ಯಪ್ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿಯಾದ ಪ್ರೊ. ಹೆಚ್. ಆರ್. ದಾಸೇಗೌಡ ಅವರು ಉಪಸ್ಥಿತರಿದ್ದರು. "ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳು" ಎಂಬ ವಿಷಯವನ್ನು ಕುರಿತು ಡಾ। ರಮೇಶ್‌ಚಂದ್ರ ದತ್ತ ಅವರು ಭಾಷಣ ಮಾಡಿದರು.

ದಿನಾಂಕ ೨-೦೫-೨೦೧೦ ಮಹಾತ್ಮಗಾಂಧೀ ಪ್ರಾಕೃತಿಕ ಯೋಗ ಚಿಕಿತ್ಸಾ ಮತ್ತು ತರಬೇತಿ ಕೇಂದ್ರ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ) ಸಹಯೋಗದೊಂದಿಗೆ ಉಚಿತ ಪ್ರಕೃತಿ ಯೋಗ ಚಿಕಿತ್ಸಾ ಶಿಬಿರದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲಾಯಿತು. ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ರಾಮಚಂದ್ರೇಗೌಡರು, ವೈದ್ಯಕೀಯ ಶಿಕ್ಷಣ ಸಚಿವರು. ಕರ್ನಾಟಕ ಸರ್ಕಾರ ಇವರು ನೆರವೇರಿಸಿದರು ಅಧ್ಯಕ್ಷತೆಯನ್ನು ಡಾ. ಹೊ. ಶ್ರೀನಿವಾಸಯ್ಯ, ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಬಿ. ಟಿ. ಚಿದಾನಂದಮೂರ್ತಿ, ನಿರ್ದೇಶಕರು. ಸಿ. ಸಿ. ಆರ್. ಎಸ್. ವೈ. ನವದೆಹಲಿ ಹಾಗೂ ಪ್ರೊ. ಶಂಕರ್ ಕೆ. ಸಿರಿ, ನಿವೃತ್ತ ಪ್ರಾಂಶುಪಾಲರು, ವೀರೇಂದ್ರಪಾಟೀಲ್ ಪ್ರಥಮ ದರ್ಜೆ ಕಾಲೇಜು ಮತ್ತು ಪ್ರೊ. ಹೆಚ್. ಆರ್. ದಾಸೇಗೌಡ, ಕಾರ್ಯದರ್ಶಿ ಅವರುಗಳು ಉಪಸ್ಥಿತರಿದ್ದು ಪ್ರಾಸ್ತಾವಿಕ ಮಾತುಗಳನ್ನಾಡಿದರು ೧೦೦ಕ್ಕೂ ಹೆಚ್ಚು ಶಿಬಿರಾರ್ಥಿಗಳು ಇದರ ಪ್ರಯೋಜನ ಪಡೆದರು.

ದಿನಾಂಕ ೨೨-೦೬-೨೦೧೦ ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸಹಯೋಗದೊಂದಿಗೆ ಪಿಯು ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ "ಮಾನವ ಜೀವನ ಇರುವುದು-ಇರಬೇಕಾದುದು" ಎಂಬ ವಿಷಯ ಕುರಿತು



ಸ್ವಾಮಿ ವೀರೇಶಾನಂದ ಸರಸ್ವತಿ, ಅಧ್ಯಕ್ಷರು. ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ. ತುಮಕೂರು ಅವರು ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಡಾ. ಹೊ. ಶ್ರೀನಿವಾಸಯ್ಯ. ಅಧ್ಯಕ್ಷರು ಕ. ಗಾಂ. ಸ್ಮಾರಕ ನಿಧಿ. ಡಾ. ವೂಡೆ ಪಿ. ಕೃಷ್ಣ. ಅಧ್ಯಕ್ಷರು, ಗಾಂಧೀ ಶಾಂತಿ ಪ್ರತಿಷ್ಠಾನ ಇವರು ಆಗಮಿಸಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಡಿ. ಕೆ. ಕೋದಂಡರಾಮ. ಸಹ ಕಾರ್ಯದರ್ಶಿ, ಕ. ಗಾಂ. ಸ್ಮಾರಕ ನಿಧಿ. ಶ್ರೀಮತಿ ಕೆ. ಪಿ. ಅನುಪಮ, ಕೊ. ಆರ್ಡಿನೇಟರ್, ಮಹಿಳಾ ಮತ್ತು ಮಕ್ಕಳ ಕಾರ್ಯಕ್ರಮಗಳು. ಗಾಂ. ಶಾಂ. ಪ್ರ.. ಪ್ರೊ ಹೆಚ್. ಆರ್. ದಾಸೇಗೌಡ ಅವರು, ಕಾರ್ಯದರ್ಶಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಇವರು ಉಪಸ್ಥಿತರಿದ್ದು ಪ್ರಾಸ್ತಾವಿಕ ಮಾತನ್ನಾಡಿದರು. ಸಿದ್ಧಾರ್ಥ ಶರ್ಮ, ಕಾರ್ಯದರ್ಶಿ, ಗಾಂ. ಶಾಂ. ಪ್ರ. ಇವರು ಉಪಸ್ಥಿತರಿದ್ದು ವಂದನಾರ್ಪಣೆ ನಡಿಸಿಕೊಟ್ಟರು.


ದಿನಾಂಕ ೨೫-೦೬-೨೦೧೦ ಬೆಳಗ್ಗೆ ೧೧.೦೦ ಗಂಟೆಗೆ ಭಾರತ ಯಾತ್ರಾ ಕೇಂದ್ರ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಡಾ. ರಾಮ ಮನೋಹರ ಲೋಹಿಯಾ ಸಮತಾ ವಿಚಾರ ಟ್ರಸ್ಟ್ ಸಹಯೋಗದೊಂದಿಗೆ ಡಾ. ರಾಮ ಮನೋಹರ ಲೋಹಿಯಾ ಜನ್ಮ ಶತಮಾನೋತ್ಸವ ಹಾಗೂ ಸಮಾಜವಾದಿ ಚಿಂತಕರ ಸಮಾವೇಶವನ್ನು ನಡೆಸಲಾಯಿತು. ಅಧ್ಯಕ್ಷತೆಯನ್ನು ಶ್ರೀ ಬಿ. ಎಲ್. ಶಂಕರ್, ಭಾರತ ಯಾತ್ರಾ ಕೇಂದ್ರ ಅವರು ವಹಿಸಿದ್ದರು. ಕೆ. ವಿ. ನಾಗರಾಜಮೂರ್ತಿ, ಭಾರತ ಯಾತ್ರಾ ಕೇಂದ್ರ, ರಂಗನಾಥ್, ಲೋಹಿಯಾ ಸಮತಾ ವಿಚಾರ ಟ್ರಸ್ಟ್. ಹಾಗೂ ಪ್ರೊ. ಹೆಚ್. ಆರ್. ದಾಸೇಗೌಡ. ಕಾರ್ಯದರ್ಶಿ. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅವರು ಉಪಸ್ಥಿತಿಯಿದ್ದರು. ಅದೇ ದಿನ ಮಧ್ಯಾಹ್ನ ೩.೦೦ ಗಂಟೆಗೆ ಭಾರತ ಯಾತ್ರಾ ಕೇಂದ್ರ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ. ಡಾ. ರಾಮ ಮನೋಹರ ಲೋಹಿಯಾ ಸಮತಾ ವಿಚಾರ ಟ್ರಸ್ಟ್ ಸಹಯೋಗದೊಂದಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ - ಒಂದು ಪರಾಮರ್ಶೆ ಚಿಂತನ ಗೋಷ್ಠಿ ಕಾರ್ಯಕ್ರಮ ನಡೆಯಿತು. ಉದ್ಘಾಟನೆಯನ್ನು ಶ್ರೀ ಬಿ. ಆರ್. ಪಾಟೀಲ್ ಅವರು. ಅಧ್ಯಕ್ಷತೆಯನ್ನು ಡಾ. ಹೊ. ಶ್ರೀನಿವಾಸಯ್ಯ ಅವರು. ಅತಿಥಿಗಳಾಗಿ ಶ್ರೀ ಸೂರ್ಯಕುಮಾರ್ ಮತ್ತು ಇನ್ನಿತರ ಗಣ್ಯವ್ಯಕ್ತಿಗಳು ಪಾಲ್ಗೊಂಡಿದ್ದರು. ಕೆ. ವಿ. ನಾಗರಾಜ ಮೂರ್ತಿ. ಭಾರತ ಯಾತ್ರಾ ಕೇಂದ್ರ, ರಂಗನಾಥ್. ಲೋಹಿಯಾ ಸಮತಾ ವಿಚಾರ ಟ್ರಸ್ಟ್. ಪ್ರೊ. ಹೆಚ್. ಆರ್. ದಾಸೇಗೌಡ. ಕಾರ್ಯದರ್ಶಿ. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅವರು ಉಪಸ್ಥಿತಿಯಿದ್ದರು.

ದಿನಾಂಕ ೨೫-೬-೨೦೧೦ ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಡಯಟ್ ರಾಜಾಜಿನಗರ ೨ನೇ ಬ್ಲಾಕ್. ಬೆಂಗಳೂರು ಇಲ್ಲಿ ಗಾಂಧಿ ವಿಚಾರ ಪ್ರಚಾರ ಕಾರ್ಯಕ್ರಮವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀಯುತ ಗುರುಪ್ರಸಾದ್ ಅವರು ಮಹಾತ್ಮ ಗಾಂಧೀಜಿಯವರ ಶಿಕ್ಷಣ ತತ್ವಗಳ ಬಗ್ಗೆ ಡಯಟ್

ವಿದ್ಯಾರ್ಥಿಗಳಿಗೆ ತಿಳಿಸಿದರು. ಅಧ್ಯಕ್ಷತೆಯನ್ನು ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಯುತ ಚನ್ನಬಸಪ್ಪನವರು ಪ್ರಾಂಶುಪಾಲರು, ಡಯಟ್ ಉಪಸ್ಥಿತರಿದ್ದರು. ನಿಧಿಯ ಸಹ ಕಾರ್ಯದರ್ಶಿ ಶ್ರೀ ಡಿ. ಕೆ. ಕೋದಂಡರಾಮು ಉಪಸ್ಥಿತರಿದ್ದು ಕಾರ್ಯಕ್ರಮ ನಡೆಸಿಕೊಟ್ಟರು.

ದಿನಾಂಕ ೧-೦೭-೨೦೧೦ ರಂದು ಸಿವಿಜಿ ಅಕಾಡೆಮಿ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದೊಂದಿಗೆ ಪ್ರೊ. ಹೆಚ್. ಆರ್. ದಾಸೇಗೌಡರ ಅಭಿನಂದನೆ ಮತ್ತು ಅವರ ಹತ್ತು ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ನಡೆಸಲಾಯಿತು. ಅಭಿನಂದನೆಯನ್ನು ಸಹಕಾರಿ ರತ್ನ ಬಿ. ಎಲ್. ಲಕ್ಕೇಗೌಡ, ಸಂಸ್ಥಾಪಕ, ಭಾರತ್ ಸಮೂಹ ಸಂಸ್ಥೆಗಳು ನಡೆಸಿಕೊಟ್ಟರು. ಪುಸ್ತಕಗಳ ಲೋಕಾರ್ಪಣೆಯನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಪೂರ್ಣಿ ಶ್ರೀನಿವಾಸ್, ಸಂಸ್ಕೃತಿ ಚಿಂತಕರು ಹಾಗೂ ಡಾ. ಬೈರಮಂಗಲ ರಾಮೇಗೌಡ, ಸಾಹಿತಿ ಮತ್ತು ವಿಮರ್ಶಕರು. ಆಗಮಿಸಿದ್ದರು. ಅಧ್ಯಕ್ಷತೆಯನ್ನು ನಿಧಿಯ ಅಧ್ಯಕ್ಷರಾದ ಹೊ. ಶ್ರೀನಿವಾಸಯ್ಯ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಹೆಚ್. ಆರ್. ದಾಸೇಗೌಡರ ಅಭಿಮಾನಿ ವೃಂದ, ಸಿ. ವಿ. ಜಿ. ಅಕಾಡೆಮಿ ಅಧ್ಯಕ್ಷ ಸಿ. ವಿ. ಜಿ. ಚಂದ್ರು ಮತ್ತು ನಿಧಿಯ ಸಹಕಾರ್ಯದರ್ಶಿಯರಾದ ಡಿ. ಕೆ. ಕೋದಂಡರಾಮ ಅವರು ಉಪಸ್ಥಿತರಿದ್ದರು.

ದಿನಾಂಕ ೨-೭-೨೦೧೦ ರಂದು ಬೆಂಗಳೂರು ನಗರ ಜಿಲ್ಲಾ ಡಯಟ್, ರಾಜರಾಜೇಶ್ವರಿನಗರ ಬೆಂಗಳೂರು ಇಲ್ಲಿ ಗಾಂಧಿ ವಿಚಾರ ಪ್ರಚಾರ ಕಾರ್ಯಕ್ರಮವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀಯುತ ಗುರುಪ್ರಸಾದ್ ಅವರು ಮಹಾತ್ಮ ಗಾಂಧೀಜಿಯವರ ಶಿಕ್ಷಣ ತತ್ವಗಳ ಬಗ್ಗೆ ಡಯಟ್ ವಿದ್ಯಾರ್ಥಿಗಳಿಗೆ ತಿಳಿಸಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಯಶೋದ ಬೋಪಣ್ಣ ಅವರು ವಹಿಸಿದ್ದರು. ನಿಧಿಯ ಸಹಕಾರ್ಯದರ್ಶಿ ಶ್ರೀ ಡಿ. ಕೆ. ಕೋದಂಡರಾಮು ಉಪಸ್ಥಿತರಿದ್ದು ಕಾರ್ಯಕ್ರಮ ನಡೆಸಿಕೊಟ್ಟರು.



ಇದು ಗಾಂಧೀ ಮಾರ್ಗ!

ಎಲ್ . ನರಸಿಂಹಯ್ಯ, ತೋಂಡೋಟಿ. ತುಮಕೂರು

'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಗಾದೆ ಗಾಂಧೀಜಿಯವರ ವಿಷಯದಲ್ಲಿ ಸತ್ಯಸ್ಯ ಸತ್ಯ. ಜೀವನದ ಆಳಕ್ಕೆ ಇಳಿದು ಸಾರವನ್ನು ಹೀರಿಕೊಂಡು ಎತ್ತರಕ್ಕೆ, ಅಸಾಮಾನ್ಯವೆಂಬಷ್ಟು, ಆದರ್ಶವೆಂಬಷ್ಟು ಎತ್ತರಕ್ಕೆ ಅವರ ಜೀವನ ಬೆಳೆಯಿತು. ಅವರ ಆ ಜೀವನ ಕ್ರಮ ಬದಲಾವಣೆ ಗತಿಯಲ್ಲಿ ಸಾಗಿದ್ದಲ್ಲ, ಸುಧಾರಣೆಯ ಹಾದಿಯಲ್ಲಿ ಸಾಗಿದ್ದಾಗಿದೆ. ವರ್ತನೆಯಲ್ಲಿ ಪರಿವರ್ತನೆಯನ್ನು ಕಾಣಿಸಿದ್ದಾಗಿದೆ. ಆದ್ದರಿಂದಲೇ ಪರಿವರ್ತನೆಯ ಯುಗಮಂತ್ರವನ್ನು ಪ್ರತಿಪಾದಿಸಿದ ಪ್ರವಾದಿಯೂ ಅವರಾಗಿದ್ದಾರೆ.

ಮೋಹನದಾಸ, (ನಮ್ಮೆಲ್ಲರ ಗಾಂಧೀ) ಕಬಾ ಗಾಂಧಿಯ ನಾಲ್ಕನೆಯ ಹೆಂಡತಿಯ ನಾಲ್ಕನೆಯ ಮಗ ಹಾಗೂ ಕೊನೆಯ ಮಗ. ಸ್ವಲ್ಪ ಮಟ್ಟಿಗೆ ವಿಷಯಾಸಕ್ತರಾಗಿದ್ದ ತನ್ನ ತಂದೆ ಕುಟುಂಬ ಪ್ರೇಮಿ, ಸತ್ಯ ಪ್ರಿಯ, ಶೂರ, ಉದಾರಿ ಮತ್ತು ಲಂಚವಿರೋಧಿ ಎಂದು ಗಾಂಧೀ ಅಭಿಪ್ರಾಯಪಡುತ್ತಾರೆ.

'ಕಾಪಿ' ಮಾಡಲೊಪ್ಪದ 'ವಿದ್ಯಾರ್ಥಿ'!


ತನ್ನ ೧೨ನೇ ವಯಸ್ಸಿನಲ್ಲಿ ಪ್ರೌಢಶಾಲೆಗೆ ಸೇರಿದ ಮೋಹನದಾಸ ಗಾಂಧಿ. ಓದಿ-ಬರೆಯುವುದರಲ್ಲಿ ಸಾಮಾನ್ಯ ಮಟ್ಟದ ವಿದ್ಯಾರ್ಥಿ. ಆದರೆ ನಡವಳಿಕೆಯಲ್ಲಿ ಮಾತ್ರ ಹಾಗಲ್ಲ. ಹಿರಿಯರಿಗೆ, ಉಪಾಧ್ಯಾಯರಿಗೆ ಮಾತ್ರವಲ್ಲ. ತನ್ನ ಸಮವಯಸ್ಕ ಸ್ನೇಹಿತರಿಗೂ ಸುಳ್ಳು ಹೇಳುವ ಅಭ್ಯಾಸವಿರಲಿಲ್ಲ. ಹೊರಗಡೆ ಯಾರೊಡನೆ ಬೆರೆಯಬೇಕಾದರೂ ಅಭ್ಯಂತರಪಡುತ್ತಿದ್ದ ಗಾಂಧಿಗೆ ಅಂಜುಬುರುಕುತನ ಮತ್ತು ಕೀಳರಿಮೆಗಳು ಕಾಡುತ್ತಿದ್ದುವು.

ಪ್ರೌಢಶಾಲೆಯ ಒಂದನೆಯ ತರಗತಿಯಲ್ಲಿ ಮೋಹನದಾಸ ಗಾಂಧಿ ಓದುತ್ತಿದ್ದಾಗ ಶಾಲೆಯ ಪರಿಶೀಲನೆಗಾಗಿ ಇನ್‌ಸ್ಪೆಕ್ಟರ್ ಬಂದಿದ್ದರು. ಅವರು ಬರೆಯಿಸಿದ ಉಕ್ತಲೇಖನದಲ್ಲಿ (Dictation) ಐದು ಬಿಡಿ ಬಿಡಿ ಪದಗಳು ಇದ್ದುವು. ಅವುಗಳಲ್ಲಿ ಒಂದಾಗಿದ್ದ ಕೆಟಲ್ (Kettle) ಪದವನ್ನು ಗಾಂಧೀ ತಪ್ಪಾಗಿ ಬರೆದಿದ್ದರು. ಅದನ್ನು ಗಮನಿಸಿದ ಉಪಾಧ್ಯಾಯರು ಪಕ್ಕದ ವಿದ್ಯಾರ್ಥಿಯಿಂದ ಕಾಪಿ ಮಾಡಿ ತಿದ್ದಿಕೊಳ್ಳುವಂತೆ ಸನ್ನೆ ಮಾಡಿದರು.

ಕಾಪಿ ಮಾಡುವುದು ತಪ್ಪು, ಕಾಪಿ ಮಾಡುವಂತೆ ಉಪಾಧ್ಯಾಯರೇ ಸೂಚಿಸುವುದೂ ತಪ್ಪು ಎನ್ನಿಸಿದ್ದರಿಂದ ಗಾಂಧಿ ಕಾಪಿ ಮಾಡುವ ಗೋಜಿಗೆ ಹೋಗಲಿಲ್ಲ. ಮಾತ್ರವಲ್ಲ, ಆ ಉಪಾಧ್ಯಾಯರ ಬಗೆಗೆ ತನಗಿದ್ದ ಗೌರವ ಕಡಿಮೆಯಾಗದಂತೆ ಎಚ್ಚರಿಕೆ ವಹಿಸಿದರು. ಏಕೆಂದರೆ ಗುರು-ಹಿರಿಯರ ದೋಷಗಳನ್ನು ಎಣಿಸುವುದು ಅವರ ಸ್ವಭಾವಕ್ಕೆ ಬಂದಿರಲಿಲ್ಲ.

ಪಿತೃಭಕ್ತಿ ಮತ್ತು ಸತ್ಯಸಂಧತೆಗಳ ಪ್ರಭಾವದಲ್ಲಿ

ಉಪಾಧ್ಯಾಯರ ಸೂಚನೆಗೆ ಕಟ್ಟುಬಿದ್ದು ತರಗತಿಯ ಪಠ್ಯ ಪುಸ್ತಕ-ಪಾಠಗಳನ್ನು ಓದುತ್ತಿದ್ದ ಗಾಂಧೀ, ಇತರೆ ಪುಸ್ತಕಗಳನ್ನು ಓದುವ ಅಭ್ಯಾಸ ಇರಿಸಿಕೊಂಡಿರಲಿಲ್ಲ. ಆದರೆ ಆ ಒಂದು ದಿನ, ಆ ಅಮೃತ ಕ್ಷಣದಲ್ಲಿ 'ಶ್ರವಣನ ಪಿತೃ ಭಕ್ತಿ' (ಕಬಾ ಗಾಂಧಿಯವರು ಕೊಂಡು ತಂದಿರಿಸಿದ್ದ) ನಾಟಕ ಕಣ್ಣಿಗೆ ಬಿತ್ತು. ಅದನ್ನು ಕೈಗೆತ್ತಿಕೊಂಡು ಆಸಕ್ತಿಯಿಂದ ಓದಿದರು. ಜೊತೆಗೆ ಸಂಚಾರೀ ಬೊಂಬೆ ಪ್ರದರ್ಶನದ ಮೂಲಕ. ಅದರ ದೃ



ರೂಪಕವನ್ನೂ ನೋಡಿದರು. ವೃದ್ಧರಾಗಿದ್ದ ಹಾಗೂ ದೃಷ್ಟಿಹೀನರಾಗಿದ್ದ ತನ್ನ ತಂದೆ-ತಾಯಂದಿರಿಗೆ ಶ್ರವಣ ಮಾಡುತ್ತಿದ್ದ ಸೇವೆ - ತನಗೊಂದು ಆದರ್ಶ ಪಾಠವೆನಿಸಿ ಅದನ್ನು ಹೃದಯದಲ್ಲಿ ತುಂಬಿಕೊಂಡರು.


ಸ್ವಲ್ಪ ಹೆಚ್ಚು-ಕಡಿಮೆ ಅದೇ ಅವಧಿಯಲ್ಲಿ ಸತ್ಯ ಹರಿಶ್ಚಂದ್ರ ನಾಟಕವನ್ನು ನೋಡುವ ಅವಕಾಶ ಗಾಂಧಿಯವರಿಗೆ ಲಭಿಸಿತು. ತಂದೆಯವರ ಅಪ್ಪಣೆ ಪಡೆದು ಮತ್ತೆ ಮತ್ತೆ ನೋಡಿದರು. ಅದು ಅವರ ಮನಸ್ಸನ್ನು ಎಷ್ಟು ಸೂರೆಗೊಂಡಿತ್ತೆಂದರೆ, ಎಷ್ಟು ಸಾರಿ ನೋಡಿದರೂ ತೃಪ್ತಿಯಾಗದಿರುವಷ್ಟು ಸೂರೆಗೊಂಡಿತ್ತು. ಸತ್ಯ ಹರಿಶ್ಚಂದ್ರನ ಪಾತ್ರವನ್ನು ತನಗೆ ತಾನೇ ಅಭಿನಯಿಸಿಕೊಂಡು ಅನುಭವಿಸಿದರು. ಹರಿಶ್ಚಂದ್ರನಂತೆ ನಾನೇಕೆ ಸತ್ಯಸಂಧನಾಗಿರಬಾರದು? ನಾನೇಕೆ ಸತ್ಯವನ್ನು ಅನುಸರಿಸಬಾರದು? ಸತ್ಯಕ್ಕಾಗಿ ಹರಿಶ್ಚಂದ್ರ ಅನುಭವಿಸಿದ ಕಷ್ಟ ಕ್ಲೇಶಗಳನ್ನು ನಾವೂ ಅನುಭವಿಸಬಾರದೇಕೆ? ಅನುಭವಿಸಬೇಕು, ಅನುಭವಿಸುವುದೇ ಆದರ್ಶವಾಗಬೇಕು ಎಂದು ಸಂಕಲ್ಪಿಸಿದರು.



ಆ ಶ್ರವಣ ಮತ್ತು ಆ ಸತ್ಯ ಹರಿಶ್ಚಂದ್ರ ಇತಿಹಾಸ ಪುರುಷರಲ್ಲವಾದರೂ ಅವರ ಸೇವಾ ನಿಷ್ಠೆ, ಮತ್ತು ಸತ್ಯಸಂಧತೆಗಳು ಮಾತ್ರ ಜೀವಂತವಾಗಿ ಉಳಿದಿವೆ, ಉಳಿಯುತ್ತವೆ ಎಂಬುದು ಅವರ ದೃಢ ನಂಬಿಕೆಯಾಯಿತು.

ಉತ್ತಮ ಬರವಣಿಗೆ – ಉತ್ತಮ ಶಿಕ್ಷಣದ ಲಕ್ಷಣ!

ಶಾಲಾ ಶಿಕ್ಷಣಾವಧಿಯಲ್ಲಿ ಒಳ್ಳೆಯ ಬರವಣಿಗೆಯ ಕಡೆಗೆ ಗಾಂಧೀ ಗಮನ ಕೊಡಲಿಲ್ಲ. ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡಿದಾಗಲೂ ಅದರ ಪ್ರಾಮುಖ್ಯತೆ ಅವರಿಗೆ ತಿಳಿಯಲಿಲ್ಲ. ಆದರೆ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿಯ ಯುವಕರ ಮತ್ತು ವಕೀಲರ ಅಂದವಾದ ಬರವಣಿಗೆಯನ್ನು ನೋಡಿದ ಮೇಲೆ ಗಾಂಧಿಯವರಿಗೆ ನಾಚಿಕೆಯಾಯಿತು. ಪಶ್ಚಾತ್ತಾಪವೂ ಆಯಿತು. ತನ್ನ ಬರಹವನ್ನು ತಿದ್ದಿಕೊಳ್ಳಲು ಪ್ರಯತ್ನವನ್ನೇನೋ ಮಾಡಿದರು. ಆದರೆ ಸುಟ್ಟ ಮಡಿಕೆಗೆ ಹಸಿಯ ಮಣ್ಣನ್ನು ಮೆತ್ತಿದಂತಾಯಿತೇ ಹೊರತು ಹೆಚ್ಚಿನ ಪ್ರಯೋಜನವಾಗಲಿಲ್ಲ. ಉತ್ತಮ ಬರವಣಿಗೆ ಉತ್ತಮ ಶಿಕ್ಷಣದ ಲಕ್ಷಣವೆಂಬುದನ್ನು ಪ್ರತಿ ಯುವಕ-ಯುವತಿ ಮನಗಾಣಬೇಕೆಂದು ಗಾಂಧೀ ಆಶಿಸಿದರು.



43

ಗಾಂಧೀಜಿಯನ್ನು ತಿಳಿಯುವ ತೊಂದರೆ ತೆಗೆದುಕೊಳ್ಳಿ!

–ಡಾ.ಪಾಟೀಲ ಪುಟ್ಟಪ್ಪ


ತಮಗೆ ತಿಳಿಯದಿರುವ ಮಾತನ್ನು ತಿಳಿದವರಂತೆ ಮಾತನಾಡುವುದು ನಮ್ಮ ದೇಶದ ರಾಜಕಾರಣಿಗಳಿಗೆ ಅಭ್ಯಾಸವಾಗಿದೆ. ಅದೇ ಜಾಡಿನಲ್ಲಿ ನಮ್ಮ ಕೆಲ ಸಣ್ಣ, ದೊಡ್ಡ ಅಧಿಕಾರಿಗಳೂ ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎಂಬಂತೆ ನಡೆದಿದ್ದಾರೆ.

ಬಾಬಾ ಸಾಹೇಬ ಅಂಬೇಡಕರರ ೧೧೯ನೆಯ ಜನ್ಮದಿನದ ನಿಮಿತ್ತ ಮೈಸೂರು ಜಿಲ್ಲಾ ಎಸ್ಸಿ, ಎಸ್ಟಿ ಪ್ರೌಢಶಾಲಾ ಶಿಕ್ಷಕರ ಸಂಘವು ಏರ್ಪಡಿಸಿದ್ದ ಸಮಾರಂಭದಲ್ಲಿ ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ವ್ಯವಸ್ಥಾಪಕರಾದ ರಾಜಶೇಖರಮೂರ್ತಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಅವರು ಮಾತನಾಡಿದುದನ್ನು ಮೈಸೂರಿನ ದಿನಪತ್ರಿಕೆ ವರದಿಮಾಡಿದೆ.

'ಅಂಬೇಡಕರರು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಬೇಕಾದರೆ ಅದಕ್ಕೆ ಗಾಂಧಿ ಕಾರಣ ಎಂದು ಹೇಳುವುದರಲ್ಲಿ ಅರ್ಥವಿಲ್ಲ' ಎಂದು ಅವರು ಆಗ ಹೇಳಿದರು.

ಆ ಕಾಲದ ವಿದ್ಯಮಾನಗಳನ್ನು ತಿಳಿದವರಂತೆ ಅವರು ಮಾತನಾಡಿದ್ದಾರೆ. ಆ ಕಾಲದಲ್ಲಿ ಏನು ನಡೆಯಿತು ಎನ್ನುವುದು ಅವರಿಗೇನು ಗೊತ್ತು? ಅಂಬೇಡಕರರು ನೆಹರೂ ಸಂಪುಟದಲ್ಲಿ ಕಾನೂನು ಮಂತ್ರಿಗಳಾಗಿದ್ದರು. ಅವರು ಕಾನೂನು ಮಂತ್ರಿ ಆಗಿದ್ದರೆನ್ನುವ ಕಾರಣದಿಂದಲೇ ಅವರು ಸಂವಿಧಾನ ರಚನಾ ಸಭೆಯ ಚೇರಮನ್ ಆದರು.

ಅಂಬೇಡಕರರು ದೊಡ್ಡವರು, ಬಹಳ ದೊಡ್ಡವರು, ಅದು ನಿರ್ವಿವಾದ. ಆದರೆ ಅವರು ರಾಜಕೀಯದ ಮುಖ್ಯ ವಾಹಿನಿಯಿಂದ ದೂರದಲ್ಲಿದ್ದರು. ಭಾರತದ ಸಚಿವ ಸಂಪುಟ ರಚಿಸುವ ಅಧಿಕಾರ ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದಿತು.



ಜವಾಹರಲಾಲರು ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ತಮ್ಮ ಮಂತ್ರಿ ಮಂಡಲದಲ್ಲಿ ಇರುವ ಸಂಭಾವ್ಯ ಮಂತ್ರಿಗಳ ಬಗೆಗೆ ಚರ್ಚಿಸಲು ಅವರು ಮಹಾತ್ಮಾ ಗಾಂಧಿಯವರ ಬಳಿಗೆ ಹೋಗಿದ್ದರು. ಆಗ ಗಾಂಧೀಜಿಯವರು ಅವರಿಗೆ, ಡಾ. ಬಿ.ಆರ್. ಅಂಬೇಡಕರರು ಸಂಪುಟದಲ್ಲಿ ಇರಬೇಕೆಂದು ತಿಳಿಸಿದರು. ಅವರು ಸಂಪುಟದಲ್ಲಿ ಬಂದ ಮೇಲೆ ಭಾರತ ಸರಕಾರದ ಕಾನೂನು ಮಂತ್ರಿ ಆದರು. ಸಂಗತಿ ಹೀಗಿರುವಾಗ, ಗೊತ್ತಿಲ್ಲದವರು ಗೊತ್ತಿದ್ದವರಂತೆ ಹೇಳುವುದು ಸತ್ಯಕ್ಕೆ ಅನ್ಯಾಯವೆಸಗಿದಂತೆ, ನಾಗರಿಕ ಸಮಾಜದ ಮೌಲ್ಯಗಳಿಗೂ ಅಪಚಾರವೆಸಗಿದಂತೆ ಆಗುತ್ತದೆ.

ನಮ್ಮ ದೇಶದ ಬುದ್ಧಿವಾದಿಗಳು ಮಹಾತ್ಮಾ ಗಾಂಧಿಯವರ ಬಗೆಗೆ ಮಾಡಿರುವ. ಮಾಡುತ್ತಿರುವ ಅಪರಾಧ ಕ್ಷಮಿಸುವಂಥದಲ್ಲ. ದೇಶದ ಅನೇಕ ವೇದಿಕೆಗಳಲ್ಲಿ ಗಾಂಧಿ. ಅಂಬೇಡಕರರನ್ನು ಹೋಲಿಸಿ. ಗಾಂಧಿಯವರು ಅಂಬೇಡಕರರಂತೆ ಉಗ್ರಗಾಮಿಗಳಲ್ಲವೆಂದು ಹೇಳುತ್ತ. ಗಾಂಧಿಯವರನ್ನು ಕಡಿಮೆ ಮಾಡಿ ತೋರುವ ಪ್ರಯತ್ನ ಮಾಡುತ್ತಾರೆ.

ಮಹಾತ್ಮಾ ಗಾಂಧಿ ಮತ್ತು ಬಾಬಾಸಾಹೇಬ ಅಂಬೇಡಕರರು ಒಂದೇ ಬಗೆಯ


ವ್ಯಕ್ತಿಗಳಾಗಿರದೆ, ಬೇರೆ ಬೇರೆ ಬಗೆಯ ವ್ಯಕ್ತಿಗಳಾಗಿದ್ದರು. ಇಬ್ಬರೂ ಒಂದೇ ಬಗೆಯ ವ್ಯಕ್ತಿಗಳಾಗಿದ್ದರೆ ಪರಸ್ಪರರನ್ನು ಹೋಲಿಕೆ ಮಾಡಿ ಇವರು ಹೀಗೆ, ಅವರು ಹಾಗೆ ಎಂದು ವಿಂಗಡಣೆ ಮಾಡಿ ಹೇಳಬಹುದು.

ಗಾಂಧಿಯವರ ಕಾರ್ಯಕ್ಷೇತ್ರ ಬೇರೆ, ಅಂಬೇಡಕರರ ಕಾರ್ಯಕ್ಷೇತ್ರವೇ ಬೇರೆ. ತಂತಮ್ಮ ಚಿತ್ರ ರೇಖಿಸಲು ಗಾಂಧೀಜಿ ಮತ್ತು ಅಂಬೇಡಕರರು ಉಪಯೋಗಿಸಿದ ಕ್ಯಾನವಾಸ್‌ಗಳು ವಿಭಿನ್ನವಾಗಿದ್ದವು. ತಮ್ಮ ಅಹಿಂಸಾತ್ಮಕ ಹೋರಾಟದ ಮೂಲಕ ಬಹುದೊಡ್ಡ ಸೈನ್ಯ ಬಲದ ಬಲಾಢ್ಯ ರಾಷ್ಟ್ರವನ್ನು ಭಾರತದಿಂದ ಹೊರಹಾಕಿ ಮಹಾತ್ಮಾ ಗಾಂಧಿಯವರು ಜಗತ್ತಿನ ಹೊಸ ಇತಿಹಾಸವನ್ನು ನಿರ್ಮಿಸಿದರು. ಅವರ ಹೋರಾಟವು ಭಾರತದ ಜನಜೀವನದ ಎಲ್ಲ ರಂಗಗಳನ್ನು ಒಳಗೊಳ್ಳುವಂತೆ ವ್ಯಾಪಕವಾಗಿದ್ದಿತು. ಅಂಬೇಡಕರರು ಭಾರತದ ಜಡ್ಡುಗಟ್ಟಿದ್ದ, ಮನುಷ್ಯ ಮನುಷ್ಯರಲ್ಲಿ ವಿಪರೀತವೆನ್ನುವ ಅಸಮಾನತೆಯನ್ನು ನಿರ್ಮಿಸಿದ್ದ ಸಮಾಜ ವ್ಯವಸ್ಥೆಯ ವಿರುದ್ಧ ಹೋರಾಟ ಹೂಡಿದ್ದು ಮನುಷ್ಯನ ಬಂಧ ವಿಮೋಚನೆಗಾಗಿ ತಮ್ಮ ಯಾವ ಜೀವನವೂ ಕ್ರಮಿಸಿದ ಕಥೆಯು ಮಾನವ ಇತಿಹಾಸದ ಒಂದು ಅವಿಸ್ಮರಣೀಯ ಘಟನೆ.

ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತೆಯ ಕಳಂಕವನ್ನು ನಿವಾರಿಸಲು ಕೈಕೊಂಡ ಹೋರಾಟವು ಅವರು ಹೂಡಿದ ರಾಜಕೀಯ ಆಂದೋಲನದ ಒಂದು ಅವಿಭಾಜ್ಯ ಅಂಗವೇ ಆಗಿದ್ದಿತು. ಸಹಪಂಕ್ತಿ, ಸಹಭೋಜನ ಹಾಗೂ ದೇವಾಲಯ ಪ್ರವೇಶಗಳ ಮೂಲಕ,ಸಮಾಜದಿಂದ ಪರಿತ್ಯಕ್ತರಾಗಿ, ಅಸ್ಪೃಶ್ಯರೆಂದು ಪರಿಗಣಿತರಾಗಿದ್ದ ಪರಿಶಿಷ್ಟ ಜಾತಿಗೆ ಸೇರಿದ ಜನರಿಗೆ ಭಾರತದಲ್ಲಿ ಗಾಂಧಿಯವರು ಸ್ವೀಕಾರಾರ್ಹತೆ ತಂದು ಕೊಟ್ಟರು.

ಜನರನ್ನು ಮಣ್ಣು ಮಾಡುವ ಶಕ್ತಿಗಳು ಜಗತ್ತಿನಲ್ಲಿ ತುಂಬಿಕೊಂಡಿವೆ. ಆದರೆ ಮಹಾತ್ಮಾ ಗಾಂಧಿಯವರು ಮಣ್ಣಾಗಿದ್ದ ಜನರನ್ನು ಮನುಷ್ಯರನ್ನಾಗಿ ಮಾಡಿದರು. ಈ ಮಾತನ್ನು ಭಾರತೀಯರೆಲ್ಲರೂ ಅದರಲ್ಲಿಯೂ ಅಸ್ಪೃಶ್ಯರೆನ್ನುವ ಅಸಹ್ಯ ಅಪಹೇಳನಕ್ಕೆ ಗುರಿಯಾಗಿರುವ ಜನರು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ.

ನಾನು, ಒಂದೂ ಸಮಾಜಕ್ಕೆ ಅಂಟದ ಈ ಅಸಹನೀಯ



ಕಳಂಕದ ಕಡುವೈರಿ ಆಗಿದ್ದೇನೆ. ಮಾದಾರ ಚೆನ್ನಯ್ಯನ ಅಂಬಲಿಯನ್ನು ಉಂಡ ಬಸವಣ್ಣ ನನ್ನ ಆದರ್ಶ.

ಚೆನ್ನಯ್ಯನ ಮನೆಯ ಅಂಬಲಿಯನ್ನು ಉಣ್ಣುವವರು ಯಾರಿದ್ದೀರಿ ಎಂದು ನಾನು ಎಷ್ಟೋ ಜನ ಸ್ವಾಮಿಗಳನ್ನು ಕೇಳಿದ್ದೇನೆ.

ಗಾಂಧೀಜಿ ಇಲ್ಲದಿದ್ದರೆ ನಾನು ಮನುಷ್ಯನಾಗುತ್ತಿರಲಿಲ್ಲ. ನಾನು ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಭೆ ಸಮಾರಂಭಗಳಿಗೆ ಹೋಗಿದ್ದೇನೆ. ಆ ವಿದ್ಯಾರ್ಥಿಗಳು ಅಮಾಯಕರು. ಅವರಲ್ಲಿ ಎಷ್ಟೋ ವಿದ್ಯಾರ್ಥಿಗಳಿಗೆ ದೇಶದ ವ್ಯಕ್ತಿಗಳ ಬಗೆಗೆ, ದೇಶದ ಆಗು-ಹೋಗುಗಳ ಬಗೆಗೆ ಯಥಾರ್ಥವಾದ ಜ್ಞಾನವಿಲ್ಲ. ಅಂಬೇಡಕರರ ಬಗೆಗೆ ಅವರಲ್ಲಿ ಅಭಿಮಾನ ಇರಬೇಕು, ಅದು ಸಹಜ. ಅವರಿಗೆ ಮಾತ್ರವಲ್ಲ, ದೇಶದ ಇನ್ನುಳಿದ ಜನರಿಗೂ ಆ ಅಭಿಮಾನ ಇರಬೇಕು. ಬಾಬಾ ಸಾಹೇಬರು ನಮ್ಮ ದೇಶದ ಅನರ್ಘ್ಯ ರತ್ನ. ಅದರ ಬಗೆಗೆ ಎರಡು ಅಭಿಪ್ರಾಯಗಳಿಲ್ಲ.

ಆದರೆ, ಬೆಳೆಯುವ ಮುಗ್ಧ ಅಮಾಯಕ ವಿದ್ಯಾರ್ಥಿಗಳಲ್ಲಿ ಗಾಂಧೀಜಿಯವರ ಬಗೆಗೆ ಯಾರು ವಿಷಬೀಜ ಬಿತ್ತಿದರೋ ಏನೋ! ಆ ವಿದ್ಯಾರ್ಥಿಗಳು ಮಹಾತ್ಮಾ ಗಾಂಧೀಜಿಯವರನ್ನು ಪರಿಶಿಷ್ಟ ಜಾತಿಯ ಕಡು ವೈರಿಗಳೆಂದು ತಿಳಿದಿದ್ದಾರೆ ಮತ್ತು ವಾದಿಸುತ್ತಾರೆ. ಇದರ ಬಗೆಗೆ ಪರಿಶಿಷ್ಟ ಜಾತಿಯ ಜನರೆಲ್ಲ, ವಿಶೇಷವಾಗಿ ಆ ಜನರಲ್ಲಿ ಬುದ್ಧಿವಂತರಾದವರು ತಮ್ಮ ಆತ್ಮಪರೀಕ್ಷೆ ಮಾಡಿಕೊಳ್ಳಬೇಕು.

ಅಂಬೇಡಕರರನ್ನು ಆಕಾಶಕ್ಕೇರಿಸುವ ಭರದಲ್ಲಿ ಗಾಂಧಿಯವರನ್ನು ತುಳಿದು ಪಾತಾಳಕ್ಕೆ ತಳ್ಳುವುದು ಸರಿಯಲ್ಲ.



* ದೇವರಿದ್ದಾನೆ ಎಂಬ ಕಾರಣದಿಂದಲೇ ನಾವು ಬದುಕಿದ್ದೇವೆ.

***

* ಮಾನವನೂ ಉಳಿದೆಲ್ಲ ಜೀವಜಂತುಗಳೂ ದೇವರ ಅಂಶವೇ ಸರಿ.


***

* ಪ್ರಲೋಭನೆಯತ್ತ ನಮ್ಮನ್ನು ಸೆಳೆಯುವ ದೇವರೇ ಕೆಡುಕಿನಿಂದ ಪಾರು ಮಾಡುತ್ತಾನೆ.

***

* ದೇವರು ಅಸಹಾಯಕರಿಗೆ ಸರ್ವಸಹಾಯಕ.

***



'ಗಾಂಧಿಯಾನ' ರೂಪುಗೊಂಡಿದ್ದು

'ಗಾಂಧಿಯಾನ' ಪ್ರೊ. ಎಚ್. ಆರ್. ದಾಸೇಗೌಡರ ಕನಸಿನ ಕೂಸು. ಈ ಕನಸನ್ನು ಕಳೆದ ಒಂದು ವರ್ಷದಿಂದ ಆಗಾಗ ನನ್ನ ಬಳಿ ತೇಲಿಬಿಡುತ್ತಲೇ ಇದ್ದರು. ನನ್ನೆಲ್ಲ ತಾಪತ್ರಯಗಳ ನಡುವೆ ಆ ಕನಸನ್ನು ನನ್ನೊಳಗೆ ತುಂಬಿಕೊಳ್ಳಲು ಪ್ರಯತ್ನಿಸುತ್ತ, 'ಮಾಡೋಣ ಸಾರ್' ಎಂದು ಹೇಳುತ್ತ, ನೆರವಿಗೆ ಗಟ್ಟಿಯಾಗಿ ನಿಲ್ಲುವವರಿಗಾಗಿ ಹುಡುಕುತ್ತ, ಕೊನೆಗೆ ಗಾಂಧಿ ಭವನದಲ್ಲಿದ್ದ ಪುಸ್ತಕ ಮಳಿಗೆಯನ್ನು ನನ್ನ ವಶಕ್ಕೆ ತೆಗೆದುಕೊಂಡು ಅದನ್ನು ಓರಣಗೊಳಿಸುವ ಸಂದರ್ಭದಲ್ಲಿ 'ಮಾಡಿಯೇ ತೀರಬೇಕು' ಎನ್ನುವ ಹಟ ಹುಟ್ಟಿತು. ಅಗ್ರಹಾರ ಕೃಷ್ಣಮೂರ್ತಿ ಮತ್ತು ಬೈರಮಂಗಲ ರಾಮೇಗೌಡರ ಜೊತೆಗಿನ ಸಂವಾದ 'ಗಾಂಧಿಯಾನ'ದ ದಾರಿಯನ್ನು ಸುಗಮಗೊಳಿಸಿತು. ಗಾಂಧಿ ಇಂದಿಗೂ ಮುಂದೆಯೂ ಪ್ರಸ್ತುತರೇ. ಇಂಡಿಯಾ ಮತ್ತು ಅದರ ಜನತೆಯ ವಿಚಾರವಾಗಿ ಗಾಂಧಿ ಏನು ಕನಸಿದರೋ ಅದು ವಿಜ್ಞಾನ ತಂತ್ರಜ್ಞಾನಗಳು ಇನ್ನೂ ಎಂಥೆಂಥ ಅನಾಹುತ ಮಾಡಿದರೂ ಬೇಕಾಗುವಂಥದ್ದೇ. ದಿನ ಕಳೆದಂತೆ ಜನ ಗಾಂಧಿಯನ್ನು ಮರೆಯುತ್ತಿದ್ದಾರೆ. ಇವತ್ತಿನ ತರುಣ ಜನಾಂಗಕ್ಕಂತೂ ಗಾಂಧಿಯ ಪರಿಚಯವೇ ಇಲ್ಲ. ನಮ್ಮ ಶಾಲೆ ಕಾಲೇಜಿನ ಮೇಷ್ಟರುಗಳೂ ಪಠ್ಯಕ್ರಮದ ನೆಪದಲ್ಲೇ ಗಾಂಧೀ ವಿಚಾರಧಾರೆಯನ್ನು ಹದವಾಗಿ ಉಣಬಡಿಸಲಾಗದಷ್ಟು ಜಡ್ಡುಗಟ್ಟು ಹೋಗಿದ್ದಾರೆ. ಗಾಂಧಿಯ ಬಗ್ಗೆ ಏನಾದರೂ

ತಿಳಿದುಕೊಳ್ಳೋಣ ಎಂದು ಆಸಕ್ತಿ ತೋರುವವರಿಗೂ ಪುಸ್ತಕಗಳು ಸಿಗುವುದಿಲ್ಲ. ಗ್ರಂಥಾಲಯಗಳ ಕತ್ತಲಲ್ಲಿ ಎಲ್ಲೋ ಧೂಳು ತಿನ್ನುತ್ತಿರುವ ಪುಸ್ತಕಗಳನ್ನು ಹೊರಗೆ ತೆರೆದು ತೋರುವ ವ್ಯವಸ್ಥೆಯಿಲ್ಲ. ಮೌಲಿಕವಾದ ಪುಸ್ತಕಗಳಿಗೂ ಪುನರ್ಮುದ್ರಣದ ಭಾಗ್ಯವಿಲ್ಲ. ಇಂಥ ದೌರ್ಭಾಗ್ಯಗಳಲ್ಲಿ ಮರೆಯಾಗುತ್ತಿರುವ ಮಹನೀಯನನ್ನು, ಆತ ಏರಿದ ಎತ್ತರವನ್ನು ಒಟ್ಟಾರೆ ಗಾಂಧಿಯ ಬದುಕು–ಸಾಧನೆಗಳನ್ನು ಸರಳವಾಗಿ ಪರಿಚಯಿಸುವ ಒಂದು ಪುಟ್ಟ ನಿಯತಕಾಲಿಕೆಯ ಹಂಬಲ ದಾಸೇಗೌಡರದು.

ಅಂಥ ಪತ್ರಿಕೆ ತರುವುದು ಸಾಧ್ಯ ಎಂದು ನನಗೆ ಧೈರ್ಯ ಬಂದಾಗ ಹೊ. ಶ್ರೀನಿವಾಸಯ್ಯ, ಎಚ್. ಆರ್. ದಾಸೇಗೌಡ, ಬೈರಮಂಗಲ ರಾಮೇಗೌಡ, ಮೀರಾಸಾಬಿಹಳ್ಳಿ ಶಿವಣ್ಣ, ಓ. ಅನಂತರಾಮಯ್ಯ, ಎಂ. ಜಿ. ಚಂದ್ರಶೇಖರಯ್ಯ ಇವರೊಂದಿಗೆ ಸಮಾಲೋಚನೆ ನಡೆಸಿ ಪತ್ರಿಕೆಯ ರೂಪುರೇಷೆ ಸಿದ್ಧಪಡಿಸಲಾಯಿತು. ಮಧ್ಯೆ ಯಾವುದೇ ಕಾರಣಕ್ಕೂ ಎಲ್ಲಿಯೂ ಪತ್ರಿಕೆ ನಿಲ್ಲದಂತೆ ನೋಡಿಕೊಳ್ಳಬೇಕೆಂಬ ದಾಸೇಗೌಡ ಎಚ್ಚರಿಕೆಯನ್ನು ಮನಸ್ಸಿನಲ್ಲಿರಿಸಿಕೊಂಡು ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳಲಾಯಿತು. ಅಗ್ರಹಾರ ಅವರಂತೂ 'ದೆಹಲಿಯಿಂದ ನನ್ನ ಲೇಖನವನ್ನು ಸಕಾಲಕ್ಕೆ ಕಳುಹಿಸಿಕೊಡುತ್ತೇನೆ' ಎಂದು ಭರವಸೆಯಿತ್ತರು. ಉಳಿದೆಲ್ಲ ಲೇಖಕರು 'ಗಾಂಧಿಯಾನ'ದ ಮೌಲ್ಯವನ್ನು ಹೆಚ್ಚಿಸುವಂಥ ಬರಹಗಳನ್ನು ಗಾಂಧಿ ಬಗೆಗಿನ ಪ್ರೀತಿ ಭಕ್ತಿ ಗೌರವಗಳಿಂದಲೇ ಸಿದ್ಧಪಡಿಸಿಕೊಟ್ಟಿದ್ದಾರೆ. ಕಲಾವಿದ ರಾಠೋಡ್ ಪತ್ರಿಕೆಯನ್ನು ಮತ್ತೆ ಮತ್ತೆ ನೋಡುವಂತೆ ಆಕರ್ಷಕ ವಿನ್ಯಾಸ ಮಾಡಿಕೊಟ್ಟಿದ್ದಾರೆ.

ಗಾಂಧಿಯನ್ನು ವರ್ತಮಾನದಲ್ಲಿ ಮರುಸ್ಥಾಪಿಸುವುದೇ 'ಗಾಂಧಿಯಾನ'ದ ಮಹದುದ್ದೇಶ. ಈಗಷ್ಟೇ ಪ್ರಾರಂಭವಾಗಿರುವ ಈ 'ಯಾನ'ದಲ್ಲಿ ನೀವೂ ಹೆಜ್ಜೆ ಹಾಕಬಹುದು. ಇದನ್ನು ಇನ್ನಷ್ಟು ಅರ್ಥಪೂರ್ಣವಾಗಿಸುವ ಸಲಹೆ ಸೂಚನೆಗಳನ್ನು ಕೊಡಬಹುದು. ಗಾಂಧಿಯಾನದ ಉದ್ದೇಶಕ್ಕೆ ಹೊಂದುವಂಥ ಕಿರುಬರಹಗಳನ್ನು ಕಳಿಸಿಕೊಡಬಹುದು. ನಮ್ಮ ಪ್ರಯತ್ನದ ಬಗೆಗೆ ನಿಮಗೇನನ್ನಿಸುತ್ತದೆಂದು ಮನಬಿಚ್ಚಿ ಸಂಕ್ಷಿಪ್ತವಾಗಿ ಪತ್ರ ಬರೆಯಬಹುದು. ಇದು ನಿಮ್ಮದೇ ಪತ್ರಿಕೆ ಎನ್ನುವ ಅಭಿಮಾನವಿರಲಿ ಎಂದು ಹೇಳುತ್ತ 'ಗಾಂಧಿಯಾನ' ವನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇವೆ.

ವಂದನೆಗಳು

ನಿಮ್ಮ ವಿಶ್ವಾಸದ

ಸಿವಿಜಿ ಚಂದ್ರು

ಸತ್ಯದ ಯಜ್ಞಕುಂಡದಲ್ಲಿ ನಾವು ಎಲ್ಲವನ್ನೂ ಅರ್ಪಿಸಿಬಿಡಬೇಕು

***



ಸದಸ್ಯತ್ವ ವಿವರ

ಆಜೀವ ಸದಸ್ಯರು ರೂ. 5,000/-
ವಾರ್ಷಿಕ ಸದಸ್ಯತ್ವ ರೂ. 200/-
ವಾರ್ಷಿಕ ಸಂಸ್ಥೆಗಳಿಗೆ ರೂ. 300/-
ಬಿಡಿ ಪ್ರತಿ ರೂ. 25/-
ಡಿಡಿ/ಚೆಕ್‌ಗಳನ್ನು 'ಗಾಂಧಿಯಾನ ಪಬ್ಲಿಷಿಂಗ್ ಹೌಸ್' ಹೆಸರಿನಲ್ಲಿರಬೇಕು. ಬೆಂಗಳೂರಿನ ಚೆಕ್‌ಗಳಿಗೆ ಕಮಿಷನ್ ಇಲ್ಲ. ಹೊರ ಊರಿನ ಚೆಕ್ ಕಳುಹಿಸುವವರು ಬ್ಯಾಂಕ್ ಕಮಿಷನ್ 45/- ಸೇರಿಸಿ ಪತ್ರಿಕೆ ಕಳುಹಿಸಬೇಕಾದ ವಿಳಾಸ ಸ್ಪಷ್ಟವಾಗಿ ಬರೆಯಿರಿ.


గాంధీయాన్